# HAVYAKA SANDESHA

ಹವ್ಯಕ ಸಂದೇಶ

॥धर्मो रक्षति रक्षितः॥

A Monthly Newsletter of Havyaka Welfare Trust, Estd. 1964

Vol. XXIV No. 6 September 2016 Pages 16 **Rs. 2/-**





<u>Forthcoming Event</u>

## Annual Durga Pooja

**On 9th October, 2016, 3.00 pm Onwards**

**Venue : Havyakara Sabhagraha,** Dipti Solitaire, 4th Floor, M. G. Road & L.B.S. Marg Junction, Opp. Old Post Office, Ghatkopar (W), Mumbai - 400 086.

*PAGE DONATED BY : **M/S. METALLURGICAL SERVICES,** COURTESY : **SHRI RAMESH G. HEGDE,** MADAPPAN, KARKI, DADAR T. T.*

**"Havyaka Sandesha"** is a monthly publication by **HAVYAKA WELFARE TRUST, Mumbai** B-207, Valmiki Apartment, Sundar Nagar, Kalina, Vidyanagari P. O. Mumbai - 400 098 ✆2665 2591

***Hon. Editor*** : Smt. Amita S. Bhagwat

***Editorial Committee*** : R. M. Shastri, Smt. Shashikala Hegde, Smt. Tanuja Hegde, Smt. Uma Swamy

***Publisher*** : Narayan Akadas R., Hon. Gen. Secretary

***Printed at*** : M/s. Navin Printers, Mumbai - 400 016. ✆ 2430 8316

**Havyaka Welfare Trust (Estd. 1964) :** is a charitable organisation dedicated to protect, preserve, promote, propagate & perpetuate art, science, Havyaka culture & traditional values among the members. The Trust runs medical centre at Dombivli at concessional rate and is open to all. DONATIONS TO 'HAVYAKA WELFARE TRUST' QUALIFY FOR TAX DEDUCTION UNDER SECTION 80 (G).

**Membership of Havyaka Welfare Trust :** Patron (PT) Rs. 5010/-, benefactor (BN) Rs.3010/-, Sustaining Life Member (SL) Rs. 2010/-, Life Member (LM) 510/-, Patron Foreign Member US $ 150/-. Prescribed membership forms duly filled and sent with cash / local cheques for Greater Mumbai and DD for outsiders will be accepted.Cheque & DD shall be drawn in favour of "Havyaka Welfare Trust".

***Publication :*** Authors are requested to send the materials in English / Kannada written or typed on one side of the page directly to Havyaka office addressed to the Editor "Havyaka Sandesha" or by e-mail. Topics published need not necessarily reflect the views of Havyaka Welfare Trust. Authors are solely responsible for Articles published under their name in the Havyaka Sandesha. Right to edit the material and publish rests with the Editorial Committee.

***Change of Address :*** Members are requested to intimate the office in writing or through e-mail with their Membership No.

**Managing Committee for the year 2015-2016**

***President*** : Shivkumar P. Bhagwat
***Vice - President*** : Sanjay Bhat
***Hon. Gen. Secretary*** : Narayan Akadas
***Hon. Jt. Secretary*** : R. M. Shastri, Dombivli
***Hon. Treasurer*** : A. G. Bhat

***Elected Members :***

Smt. Tanuja Hegde, Suresh Hegde, Smt. Shashikala Hegde, R. N. Kameshwar, Gautam Upadhya, Smt. Uma Swamy, Keshav Hegde, Chidanand Bhagwat, Umesh Hegde

**Co-opted Member :** Shri A. K. Bhat

***ಸಂಪಾದಕೀಯ***

# ‘ಕೈ ಹಿಡಿದು ನಡೆಸೆನ್ನನು’

‘ನಿನ್ನೊಲುಮೆ ನಮಗಿರಲಿ ತಂದೆ; ಕೈ ಹಿಡಿದು ನೀ ನಡೆಸು ಮುಂದೆ’ ನಾವು ಚಿಕ್ಕವರಿರುವಾಗ ಗುನುಗುನಿಸುತ್ತಿರುವ ಈ ಸಾಲುಗಳು ಇಂದಿಗೂ ಕೂಡ ಆಪ್ಯಾಯಮಾನವೆನಿಸುತ್ತವೆ.

ಚಿಕ್ಕಂದಿನಲ್ಲಿ ಉರಿಯುವ ಬೆಂಕಿಯಲ್ಲಿ ಕೈ ಹಾಕಿದರೆ ಸುಡುತ್ತದೆ ಎನ್ನುವ ಪರಿಜ್ಞಾನವೂ ಇರದಿರುವಾಗ ನಮ್ಮನ್ನು ಎಚ್ಚರಿಸುತ್ತ ಸರಿ ತಪ್ಪುಗಳ ಜ್ಞಾನ ಮೂಡಿಸುವವರು ಅಪ್ಪ, ಅಮ್ಮ. ‘ಬೇಡ’ ‘ನಿಲ್ಲು’ ‘ಸಾಕು’ ಎನ್ನುವ ಶಬ್ದಗಳೊಂದಿಗೇನೇ ನಮ್ಮ ಬೆಳವಣಿಗೆ. ಮನೆಯೊಳಗಿನ ಪ್ರೀತಿಯ ಬೆಚ್ಚನೆಯ ವಾತಾವರಣದಿಂದ ಹೊರಜಗತ್ತಿಗೆ ನಾವು ಕಾಲಿಡುವುದೇ ಶಾಲೆಯ ಮೂಲಕ.

ಸಾಮಾನ್ಯ ವಿಜ್ಞಾನ, ಸಾಮಾಜಿಕ ಶಾಸ್ತ್ರ, ವಿವಿಧ ಭಾಷೆಗಳ ಪರಿಚಯದೊಂದಿಗೆ ಜತೆಯಲ್ಲಿರುವ ಸಹಪಾಠಿಗಳೊಂದಿಗೆ ಸಂವಹನ. ಅರಿಯುವ ಹಾಗೂ ಅರಳುವ ಈ ಕಾಲಘಟ್ಟದಲ್ಲಿಯೇ ನಮ್ಮ ವ್ಯಕ್ತಿತ್ವ ಕೂಡ ರೂಪುಗೊಳ್ಳುತ್ತದೆ.

ನಾವು ವಿದ್ಯಾಸಂಸ್ಥೆಗಳ ಆವರಣದಿಂದ ಹೊರಬಂದ ಮೇಲೆ ನಮ್ಮ ಪಯಣದುದ್ದಕ್ಕೂ ನಮ್ಮ ಬಾಲ್ಯ ಸ್ನೇಹಿತರೂ, ನಮ್ಮನ್ನು ರೂಪಿಸಿದ ಶಿಕ್ಷಕರೂ, ತಮ್ಮ ನೆನಪಿನೊಂದಿಗೆ ಸದಾ ಜೊತೆಯಲ್ಲಿರುತ್ತಾರೆ.

ತಮ್ಮ ಜ್ಞಾನದೊಂದಿಗೆ ಸೊಗಸಾದ ನಿರೂಪಣಾ ಶೈಲಿಯೊಂದಿಗೆ ವಿಷಯಗಳ ಮೇಲೆ ಆಸಕ್ತಿ ಬೆಳೆಸುವ ಶಿಕ್ಷಕರು; ಬೆನ್ನುತಟ್ಟಿ ಹುರಿದುಂಬಿಸಿ ಮುನ್ನುಗ್ಗುವ ಛಲ ಬೆಳೆಸುವ ಶಿಕ್ಷಕರು; ಮಾತಿನ ಛಡಿಯಿಂದ ನಮ್ಮನ್ನು ಎಚ್ಚರಿಸುವ ಶಿಕ್ಷಕರು; ಛಡಿಯಿಂದ ನಮ್ಮ ಬಡಿದೆಬ್ಬಿಸುವ ಶಿಕ್ಷಕರು! ಇವರೇ ನಮ್ಮ ವ್ಯಕ್ತಿತ್ವದ ರೂವಾರಿಗಳಲ್ಲವೇ?

ಶಿಕ್ಷಕರು ಕಟುನುಡಿಗಳನ್ನಾಡುವಾಗ, ಶಿಸ್ತಿನಿಂದ ತಿದ್ದುವಾಗ ಒಳಗಿಂದೊಳಗೇ ಸಿಡಿಮಿಡಿಗೊಳ್ಳುವ ವಿದ್ಯಾರ್ಥಿಗಳು ಜೀವನದ ಪಾಠಶಾಲೆಯಲ್ಲಿ ಪ್ರವೇಶಿಸಿದ ನಂತರ ಅದೇ ಶಿಕ್ಷಕರನ್ನು ಕೃತಜ್ಞತೆಯಿಂದ ನೆನೆಯುತ್ತಾರೆ ಎನ್ನುವುದು ನಿರಂತರ ಸತ್ಯ. ಅವರು ಎತ್ತಿ ತೋರಿಸಿದ ನಮ್ಮ ಲೋಪದೋಷಗಳು ನಮ್ಮನ್ನು ನಾವು ತಿದ್ದಿಕೊಳ್ಳುವುದರಲ್ಲಿ ಕಾರ್ಯತತ್ಪರರನ್ನಾಗಿ ಮಾಡುತ್ತವೆ. ಅದೇ ಲೋಪದೋಷಗಳು ನಮ್ಮನ್ನು ಬಿಟ್ಟಿಲ್ಲವೇನೋ ಎಂದು ಅನುಮಾನ ಬಂದಾಗೆಲ್ಲಾ ಶಿಕ್ಷಕರ ಮಾತು ನೆನಪಾಗುತ್ತದೆ. ಪುನಃ ಅವರನ್ನು ಮನವು ನೆನೆಯುತ್ತದೆ.

ಕಲಿಕೆಯ ಕೊಡವನ್ನು ಹೊತ್ತಿಕೊಂಡೇ ಜೀವನದಲ್ಲಿ ಸಾಗುತ್ತಿರಬೇಕು. ಶಿಕ್ಷಣಕ್ಕೆ ವಯಸ್ಸಿನ ಪರಿಮಿತಿಯಿಲ್ಲ. ನಮಗೆ ದಾರಿಗೊತ್ತಿದೆ ಎನ್ನುವ ಅಭಿಮಾನವನ್ನು ಹೆಗಲಿನ ಮೇಲೆ ಹೊತ್ತು ನೇರವಾಗಿ ನಡೆಯದೇ ಸ್ವಲ್ಪ ಅತ್ತಿತ್ತ ನೋಡಿದರೆ ಬಹಳಷ್ಟು ಜನರಿಂದ ನಾವು ಎಷ್ಟೋ ವಿಷಯಗಳನ್ನು ಕಲಿಯುವುದಿದೆ ಎನ್ನುವ ಅರಿವು ಮೂಡುತ್ತದೆ. ನಮಗಿಂತ ಚಿಕ್ಕವರಿಂದಲೂ ತಿಳಿದುಕೊಂಡು ಜೀವನದಲ್ಲಿ ಅಳವಡಿಸಿಕೊಳ್ಳಬಹುದಾದ ಸಂಗತಿಗಳಿರಬಹುದಲ್ಲವೇ?

ಹೊಗಳಿಕೆ ಎಲ್ಲರಿಗೂ ಪ್ರಿಯವಾದದ್ದು. ಆದರೆ ನಮ್ಮ ತಪ್ಪನ್ನು ತೋರಿಸುವವರೇ ನಮ್ಮ ಹಿತೈಷಿಗಳು; ನಕಾರಾತ್ಮಕ ಭಾವನೆಗಳನ್ನು ಹೋಗಲಾಡಿಸಿ ಸಕಾರಾತ್ಮಕ ಭಾವನೆಗಳನ್ನು ಮನಸ್ಸಿನಲ್ಲಿ ತುಂಬುವವರೇ ನಮ್ಮ ಬಂಧುಗಳು; ನಮ್ಮನ್ನು ತಿದ್ದುವವರೇ ನಮ್ಮ ಶಿಕ್ಷಕರು ಎನ್ನುವುದನ್ನು ಮನಗಾಣಬೇಕು.

ನಮ್ಮನ್ನು ರೂಪಿಸಿದ ಎಲ್ಲಾ ಶಿಕ್ಷಕರಿಗೂ ಶಿಕ್ಷಕರ ದಿನಾಚರಣೆಯಂದು ನಮನಗಳನ್ನು ಸಲ್ಲಿಸೋಣ.

ಅಮಿತಾ ಎಸ್ ಭಾಗವತ್

e-mail : amitabhagwat@gmail.com

*PAGE DONATED BY : **ADVOCATE M. S. PANDIT** PUNE*

# ಧರ್ಮ ಸಂಕಟ

✍ **ಗೌರೀಶ್ ಕಾಯ್ಕಿಣಿ**

ಧರ್ಮಸಂಕಟ - ಇದೊಂದು ಸಾಮಾನ್ಯವಾಗಿ ಜನಬಳಕೆಯ ಶಬ್ದ. ಆದರೆ ಇದರ ಅರ್ಥ? ಧರ್ಮಕ್ಕೆ ಬಂದ ಸಂಕಟವೇ? ಧರ್ಮವೆಂಬುದೇ ಒಂದು ಸಂಕಟವೇ? ಅಥವಾ ಧರ್ಮದಿಂದ ಉಂಟಾದ ಸಂಕಟವೇ?

ನಾವು ಅರಿತ ಮಟ್ಟಿಗೆ ಈ ಕೊನೆಯದೇ ಆ ಮಾತಿನ ಮರ್ಮ. ಅಂದರೆ ವ್ಯಕ್ತಿಗೆ ಧರ್ಮದಿಂದ ಉಂಟಾದ ಸಂಕಟ ಇಲ್ಲಿಯ ಅರ್ಥ. ಸಂಕಟ ಹಲವು ಬಗೆಯಾಗಿ ಬರುತ್ತದೆ. ಸಾಮಾನ್ಯವಾಗಿ ವೈರಿಯಿಂದ, ವಿರೋಧಿಗಳಿಂದ ಸಂಕಟ ಉಂಟಾಗುತ್ತದೆ. ಒಳಿತು ಕೆಡುಕುಗಳ ತಿಕ್ಕಾಟದಿಂದ ಈ ಸಂಕಟ. ರಾವಣನಿಗೆ ರಾಮನಿಂದ, ಸೈರಂಧ್ರಿಗೆ ಕೀಚಕನಿಂದ ಇತ್ಯಾದಿ. ಅಂದರೆ ಇಲ್ಲಿ ಸಂಕಟ ಬರುವುದು ಅನ್ಯರಿಂದ, ಹೊರಗಿನಿಂದ. ಇನ್ನು ವ್ಯಕ್ತಿಗೆ ಪರಿಸ್ಥಿತಿಯಿಂದ, ಪ್ರಕೃತಿ ಪ್ರಕೋಪದಿಂದ ಅಥವಾ ಅವನ ದೈವದಿಂದ ವಿಘ್ನಬಾಧೆ ಹುಟ್ಟುವುದುಂಟು (ನೇರ ಕಾರಣ ಗೊತ್ತಾಗದಿದ್ದರೆ ನಾವು ದೈವವನ್ನು ದೂರುತ್ತೇವೆ!)

ಇಂತಹ ಸಂಕಟದ ಬಗೆಹರಿಕೆ ಒಂದು ರೀತಿ ನೇರ. ಇದಿರಾದ ಶಕ್ತಿಗಳಲ್ಲಿ (ವ್ಯಕ್ತಿಗಳಲ್ಲಿ) ಒಂದು ಮೇಲಾದರೆ ಮುಗಿಯಿತು. ಒಂದೇ ಗೆಲುವು, ಇಲ್ಲವೇ ಸೋಲು ಸಂಕಟವನ್ನು ಮುಗಿಸುತ್ತದೆ.

ಆದರೆ ಇದಕ್ಕೂ ಸೂಕ್ಷ್ಮವಾದ ಸಂಕಟ ಹೊರಗಿನದಲ್ಲ. ನಮ್ಮ ಒಳಗಿನದು. ಕರ್ತವ್ಯ ಮತ್ತು ಕಾಮನೆ, ಸಂಕಲ್ಪ ಮತ್ತು ಮೋಹ ಇವುಗಳ ನಡುವಿನದು. ವಿಚಾರದ ವಿರುದ್ಧ ವಿಕಾರ, ಸತ್ಪ್ರವೃತ್ತಿಯ ವಿರುದ್ಧ ದುಷ್ಪ್ರವೃತ್ತಿಗಳದು. ಅಭ್ಯಾಸ ಮಾಡುವುದೋ, ಸಿನಿಮಾಕ್ಕೆ ಹೋಗುವುದೋ? ಇಲ್ಲಿ ಮೋಹ, ವಿಕಾರ ಬಲವಾದರೆ ಸಂಕಟವಿಲ್ಲ, ಪರಿಣಾಮವೇನೇ ಆಗಿರಲಿ. ಶ್ರೇಯ ಮತ್ತು ಪ್ರೇಯಗಳ ನಡುವಿನ, ಸುಖ ಮತ್ತು ಹಿತಗಳ ನಡುವಿನ ಸಂಕಟವಿದು. ಗುಣ X ದೋಷ, ನಿರ್ಧಾರ X ದೌರ್ಬಲ್ಯಗಳ ಸೆಣಸಾಟವಿದು. ಇಲ್ಲಿಯೂ ಬಲ ಮಿಗಿಲಾದಲ್ಲಿ ಜಯ.

ಆದರೆ ಇವೆಲ್ಲವನ್ನೂ ಮೀರಿ ಕಾಡುವ ಸಂಕಟ ನಿಜವಾದ ಧರ್ಮಸಂಕಟ. ಇದು ಎರಡು ಸತ್ಪ್ರವೃತ್ತಿಗಳ ನಡುವಿನದು. ರಾಮ ಲಕ್ಷ್ಮಣನಿಗೆ ಅಪ್ಪಣೆ ನೀಡುತ್ತಾನೆ - 'ಸೀತೆಯನ್ನು ಕಾಡಿನಲ್ಲಿ ಬಿಟ್ಟು ಬಾ' ಎಂದು. ಇಲ್ಲಿ ಬಂತು ಧರ್ಮಸಂಕಟ. ಅಣ್ಣನ ಆಜ್ಞೆ ಪಾಲಿಸಲೇ? ಅಥವಾ ಸೀತೆಯ ಪರಿಶುದ್ಧತೆ ಕಾಪಾಡಲೇ? ಇದೇ ಪ್ರಾಣಘಾತಕ ಪೇಚು ಪರಶುರಾಮನಿಗೆ ಉಂಟಾಗಿತ್ತು - ಜಮದಗ್ನಿಯ ಆಜ್ಞೆ ಪಾಲಿಸಲೇ? ರೇಣುಕೆಯ ಪ್ರಾಣ ಕಾಪಾಡಲೇ? ಅತ್ತ ಪಿತೃ ವಚನ ಭಂಗ, ಇತ್ತ ಮಾತೃ ಹತ್ಯೆಯ ಮಹಾಪಾಪ! ಕಾದು ಕೊಲುವೊಡೆ ಪಾಂಡು ಸುತರು ಸಹೋದರರು! ಕೊಲದಿರ್ದು ಕಾದೊಡೆ ಕೌರವಗೆ ಹೊಗಳಿಲ್ಲ! ಇದಕ್ಕೆ ಬಲಿ ಕರ್ಣ-ಪತಿಯವಸರಕೆ ಶರೀರವನು ನೂಕಿ ಪಾರಾದ.

ಇದು ನಿಜವಾದ ಧರ್ಮಸಂಕಟ. ಎರಡು ಧರ್ಮಗಳ ತಿಕ್ಕಾಟ. ಇದರಲ್ಲಿ ಸಿಲುಕಿದ ಮನಸ್ಸು, ಮನುಷ್ಯ ನುಚ್ಚು ನೂರಾಗಿ ಬಿಡುತ್ತಾನೆ. ಇಲ್ಲಿ ಅಂತಿಮ ನಿರ್ಧಾರ ಭಾರೀ ಬಿಗಿ. ಸೋಲಿರಲಿ, ಗೆಲುವಿರಲಿ ಎರಡೂ ಘೋರ ಕಷ್ಟ. ಎರಡರಲ್ಲಿ ಈವಿಲ್ ಎಂಬುದಿಲ್ಲ! ನಮ್ಮ ದುರಂತ ಇರುವುದೇ ಇಲ್ಲಿ!

(ಆಧಾರ : ಗೌರೀಶ ಕಾಯ್ಕಿಣಿಯವರ ಬೆಲೆಬಾಳುವ ಬರೆಹಗಳು)

## FOR THE ATTENTION OF MERITORIOUS CHILDREN OF OUR MEMBERS

The students who have passed the following examinations held during March – May 2016 with merit as shown below are requested to contact for consideration of awarding scholarship and certificate of excellence :

| | | |
|---|---|---|
| **S.S.C./H.S.C.** | : | **85% and above** |
| **B.Com./B.A./B.S.C and graduation in any other stream** | : | **70% and above** |
| **Graduation in Medicine/ Engineering & Post Graduation** | : | **65% and above** |

Meritorious students will be felicitated on Durga Pooja to be held on 9th October 2016 at Havyakara Sabhagraha. They are requested to give details of their names, names of their parents with their membership number, contact no. etc. to Smt. Shashikala Hegde; 9869015917 or Smt. Tanuja Hegde; 9869431749 before 30th September 2016 and are requested to bring xerox copy of their marks sheet at Durga Pooja.

**NARAYAN AKADAS**
**Hon. General Secretary**

*PAGE DONATED BY : **HEGDE HOSPITAL,** CHEMBUR, COURTESY : **DR. DINESH HEGDE***

# ಪರೀಕದ 'ಸೌಖ್ಯವನ' ಕ್ಕೆ ಇನ್ನೊಂದು ಕಿರೀಟ 'ಅನುವರ್ತನ ಚಿಕಿತ್ಸೆ'

✍ **ಪ್ರೊ. ಜಿ. ವಿ. ಜೋಶಿ, ನಿಟ್ಟೆ**

ಮಣಿಪಾಲದ ಸಮೀಪ ಪರೀಕದಲ್ಲಿ ವರ್ಷವಿಡೀ ಅದರ ಹೆಸರಿಗೆ ತಕ್ಕಂತೆ ಇರುತ್ತದೆ ಸೌಖ್ಯವನ. ಇದು ಧರ್ಮಸ್ಥಳ ಶಾಂತಿವನ ಟ್ರಸ್ಟಿನ ಸುಪರ್ದಿಯಲ್ಲಿರುವ ಸ್ವಾಸ್ಥ್ಯ ಧಾಮ. ಮನಸೂರೆಗೊಳ್ಳುವ ಪ್ರಕೃತಿ ಸೌಂದರ್ಯ, ಕಡಿಮೆ ವೆಚ್ಚದಲ್ಲಿ ಆರೋಗ್ಯ ಭಾಗ್ಯ ಒದಗಿಸುವ ಪ್ರಕೃತಿ ಚಿಕಿತ್ಸೆ ಮತ್ತು ಅನವರತ ಕ್ಷೇಮದ ಭರವಸೆ ನೀಡುವ ಯೋಗಾಭ್ಯಾಸಗಳಿಂದ ದಿನದಿಂದ ದಿನಕ್ಕೆ ಖ್ಯಾತಿ ಪಡೆಯುತ್ತಿರುವ ಸ್ಥಳ ಇದು.

ಈಗ ಸೌಖ್ಯವನ ವರ್ಷವಿಡೀ ಸಾಧಕರ (ಚಿಕಿತ್ಸೆ ಪಡೆಯುವವರ) ಯೋಗಕ್ಷೇಮ ವೃದ್ಧಿಗಾಗಿ ಬೇಕಾದ ಯೋಜನೆಗಳಿಂದ, ಕಾರ್ಯಕ್ರಮಗಳಿಂದ ಮತ್ತು ಚಿಕಿತ್ಸೆಗಳಿಂದ ತುಂಬಿತುಳುಕುತ್ತಿದೆ. ಇಲ್ಲಿಗೆ ಚಿಕಿತ್ಸೆಗಾಗಿ ಬರುತ್ತಿರುವವರ ಸಂಖ್ಯೆ ಹೆಚ್ಚುತ್ತಿದ್ದರೂ ಚಿಕಿತ್ಸೆಗಳ ಗುಣಮಟ್ಟ ಕುಸಿದಿಲ್ಲ. ಬದಲಾಗಿ ಇನ್ನಷ್ಟು ಸುಧಾರಿಸಿರುವುದು ಗಮನ ಸೆಳೆಯುವ ಸತ್ಯ ಸಂಗತಿ. ಸಿಬ್ಬಂದಿ ವರ್ಗದವರು, ಸಾಧಕರು ಸೇರಿ ಮಾಡುವ ಭಜನಾ ಕಾರ್ಯಕ್ರಮಗಳು ಮಾನಸಿಕ ಸ್ವಾಸ್ಥ್ಯಕ್ಕೆ ಪೂರಕವಾಗಿವೆ ಎನ್ನುವುದು ಇಲ್ಲಿ ಹಲವರ ಅನುಭವ. ಸೌಖ್ಯವನವನ್ನು ವಿಸ್ತೃತಗೊಳಿಸಲು ಬೇಕಾದ ಯೋಜನೆಗಳು ಸದ್ಯದಲ್ಲೇ ಕಾರ್ಯಗತಗೊಳ್ಳಲಿವೆ.



ಕಳೆದ ಒಂದು ವರ್ಷದಿಂದ ಗಮನಾರ್ಹವಾಗಿ ಸಾಧಕರಿಗೆ ನೆರವಾಗುತ್ತಿರುವ ಅನುವರ್ತನ ಚಿಕಿತ್ಸಾ ವ್ಯವಸ್ಥೆ (ರಿಫ್ಲೆಕ್ಸೋಲೋಜಿ ಟ್ರೇಕ್) ಸೌಖ್ಯವನಕ್ಕೆ ಮೂಡಿದ ಇನ್ನೊಂದು ಕಿರೀಟ. ದೇಶದಲ್ಲೇ ಅತ್ಯಂತ ಹೆಚ್ಚು ವಿಸ್ತಾರವಾದ ಪ್ರದೇಶದಲ್ಲಿ ಆರಂಭಗೊಂಡಿರುವ ಸೌಖ್ಯವನದ ಅನುವರ್ತನ ಚಿಕಿತ್ಸೆ ಚೀನಾದ ವೈದ್ಯಕೀಯ ಪದ್ಧತಿಯ ಒಂದು ವಿಧಾನ. ಶ್ರೀಮಂತರನ್ನು ಮಾತ್ರ ತಲುಪುತ್ತಿದ್ದ ಈ ಚಿಕಿತ್ಸೆಯ ಲಾಭ ಜನಸಾಮಾನ್ಯರಿಗೂ ಎಟಕುವಂತೆ ಮಾಡುವ ಉದ್ದೇಶ ಈಡೇರಿದೆ. ಇದರ ಲಾಭ ಪಡೆಯುತ್ತಿರುವವರ ಸಂಖ್ಯೆ ಗಣನೀಯವಾಗಿ ಹೆಚ್ಚುತ್ತಲಿರುವುದು ಸಂತೋಷದ ಸಂಗತಿ ಎಂದು ಶಾಂತಿವನ ಟ್ರಸ್ಟಿನ ಅಧ್ಯಕ್ಷ ಪದ್ಮವಿಭೂಷಣ ಡಾ. ಡಿ. ವೀರೇಂದ್ರ ಹೆಗ್ಗಡೆಯವರು ತೀರ ಇತ್ತೀಚೆಗೆ ನನಗೆ ಸೌಖ್ಯವನದಲ್ಲಿರುವಾಗಲೇ ತಿಳಿಸಿದರು. ಮೂಲ ಉದ್ದೇಶಕ್ಕೆ ಸ್ವಲ್ಪವೂ ಭಂಗ ಬಾರದಂತೆ ಚಿಕಿತ್ಸೆಯು ವಿಧಾನವನ್ನು ಇಲ್ಲಿ ಆಧುನೀಕರಣಗೊಳಿಸಲಾಗಿರುವುದು ವಿಶೇಷ.

ಅನುವರ್ತನ ಚಿಕಿತ್ಸೆಗಿರುವ ವೈಜ್ಞಾನಿಕ ತಳಹದಿಯನ್ನು ಕೆನಡಾದಲ್ಲಿರುವ ರಿಫ್ಲೆಕ್ಸೋಲಾಜಿ ಸಂಘ ವಿವರಿಸಿದೆ. ಅನುವರ್ತನ ಚಿಕಿತ್ಸೆಯ ಧನಾತ್ಮಕ ಪರಿಣಾಮ ಪ್ರಾರಂಭವಾಗುವುದೇ ನಮ್ಮ ಪಾದದಿಂದ. ಕಾರಣ ಅಂಗೈ ಮತ್ತು ಪಾದಗಳು ನಮ್ಮ ಇತರ ಅಂಗಾಂಗಳನ್ನು ಪ್ರತಿನಿಧಿಸುತ್ತಿರುವುದು. ಇದನ್ನೇ ಕೆನಡಾದ ಸಂಘ ಒತ್ತಿ ಹೇಳುತ್ತದೆ. ಅನುವರ್ತನ ಚಿಕಿತ್ಸೆಯಲ್ಲಿ ಯಾವುದೇ ಮುಲಾಮಿನ ಅಥವಾ ದ್ರಾವಣದ ಬಳಕೆಯಿಲ್ಲ. ಬಾಹ್ಯ ಸಾಧನಗಳು ಬೇಕಾಗಿಲ್ಲ. ಈ ಚಿಕಿತ್ಸೆ ದ್ವಾರ ನಿಯಂತ್ರಣ ಸಿದ್ಧಾಂತ ಇಲ್ಲವೇ ನೋವಿಗೆ ಸಂಬಂಧಪಟ್ಟ ನ್ಯೂರೋಮೆಟ್ರಿಕ್ ಸಿದ್ಧಾಂತದ ಮೇಲೆ ನಿಂತಿದೆ. ನಮ್ಮ ದೇಹದಲ್ಲಿರುವ ಒತ್ತಡ ಬಿಂದುಗಳನ್ನು ಪಾದಗಳ ಮೂಲಕ ಪ್ರಚೋದಿಸಿದರೆ ಪ್ರಾಣಶಕ್ತಿ ಸರಿಯಾದ ರೀತಿಯಲ್ಲಿ ಸಂಚಾರವಾಗುತ್ತದೆ. ಮೂತ್ರ ಜನಕಾಂಗಗಳಿಗೆ (ಕಿಡ್ನಿಗಳಿಗೆ) ಮತ್ತು ಕರುಳುಗಳಿಗೆ ಅಧಿಕ ರಕ್ತದ ಸಂಚಾರ ಕೂಡ ಸುಲಭ ಸಾಧ್ಯ. ಸಂಶೋಧನೆಗಳು ತೋರಿಸುವಂತೆ ಮಾನಸಿಕ ಉದ್ವೇಗ / ಖಿನ್ನತೆ, ಅಸ್ತಮಾ, ನೋವಿನ ಕಾಯಿಲೆಗಳು, ಶ್ವಾಸಕೋಶ ಸಂಬಂಧಿ ತೊಂದರೆಗಳು, ಮಲಬದ್ಧತೆ, ಮೈಗ್ರೇನ್ ಮುಂತಾದ ಕಾಯಿಲೆಗಳಿಂದ ಬಳಲುತ್ತಿರುವವರಿಗೆ ಅನುವರ್ತನ ಚಿಕಿತ್ಸೆ ತುಂಬಾ ಹಿತಕಾರಿ. ಅನುವರ್ತನ ಚಿಕಿತ್ಸೆಯ ಲಾಭಗಳನ್ನು ಯೋಗಗುರು, ಸೌಖ್ಯವನದ ಪ್ರಮುಖ ವೈದ್ಯಾಧಿಕಾರಿ, ವಾಗ್ಮಿ ಡಾ. ಶಿವರಾಜ ಪಾಟೀಲರಿಂದ ತಿಳಿಯುವುದು ಒಂದು ಸದವಕಾಶವೇ. ಅನುವರ್ತನ ಚಿಕಿತ್ಸೆಯಲ್ಲಿ ಒಟ್ಟು ನಾಲ್ಕು ಸುತ್ತುಗಳಿವೆ. ವೈವಿಧ್ಯತೆ ಇದರ ಮೆರುಗು. ಮೊದಲನೆಯ ಸುತ್ತಿನಲ್ಲಿ ಎಂಟು ಭಾಗಗಳಿದ್ದು ಚಿಕಿತ್ಸೆಯ ಸಮಯದಲ್ಲಿ ಬಿಸಿ ಮತ್ತು ತಣ್ಣೀರನ್ನು ಶಾಸ್ತ್ರೀಯವಾಗಿ, ಮಿತವಾಗಿ, ಕಾಳಜಿಪೂರ್ವಕವಾಗಿ ಬಳಸಲಾಗುತ್ತದೆ. ಬಿಳಿ ಕಲ್ಲುಗಳು ಬಿಸಿಯನ್ನು ಹೀರಿ ಶಾಖವನ್ನು ಹೆಚ್ಚು ಮಾಡುವುದರಿಂದ ಬಿಸಿ ನೀರು ಇರುವ ಭಾಗಗಳಲ್ಲಿ ಅವುಗಳನ್ನು ಹಾಕಲಾಗಿದೆ. ಕಂದು ಹಾಗೂ ಕಪ್ಪು ಕಲ್ಲುಗಳು ಹೆಚ್ಚು ತಂಪನ್ನು ಹೀರುವುದರಿಂದ ತಣ್ಣೀರು ಬರುವಲ್ಲಿ ಅವುಗಳ ಬಳಕೆ.

ಎರಡನೇ ಸುತ್ತಿನಲ್ಲಿ ಸಿಗುವ ಮರಳು ಪಾದಗಳಿಗೆ ಅತಿ ಹೆಚ್ಚಿನ ಒತ್ತಡ ನೀಡುತ್ತದೆ. ಹೀಗಾಗಿ ಒತ್ತಡ ಬಿಂದುಗಳ ಪ್ರಚೋದನೆಗೆ ಕಾರಣವಾಗುತ್ತದೆ. ಮೂರನೆಯ ಸುತ್ತಿನಲ್ಲಿರುವ ಬಿಳಿ ಕಲ್ಲುಗಳು (ಮಾರ್ಬಲ್ ಕಲ್ಲುಗಳು) ಮಾಲೀಶ್ ಪರಿಣಾಮ ನೀಡುತ್ತವೆ. ನಾಲ್ಕನೇ ಸುತ್ತಿನಲ್ಲಿ ಪಾದಗಳ ಸಂಪರ್ಕಕ್ಕೆ ಬರುವ ಅತೀ ಮೆದುವಾದ ಮರಳು ಮೃದುತ್ವ ನೀಡುವುದು ಒಂದು ವಿಶಿಷ್ಟವಾದ ಅನುಭವ. ಇಲ್ಲಿ ನಾಲ್ಕು ಸುತ್ತುಗಳ ಅವಧಿ ಕೇವಲ ಇಪ್ಪತ್ತು ನಿಮಿಷಗಳು. ಅನುವರ್ತನ ಚಿಕಿತ್ಸೆಯ ಲಾಭ ಪಡೆಯುವ ಸಾಧಕರ ಮನಸ್ಸನ್ನು ಕೇಂದ್ರೀಕೃತಗೊಳಿಸಲು ಬೇಕಾದ ಮ್ಯೂಸಿಕ್ ಕೂಡ ಚಿಕಿತ್ಸೆಯ ಒಂದು ಭಾಗ. ಚಿಕಿತ್ಸೆಗೆ ಬೇಕಾದ ಮಾರ್ಬಲ್ ಕಲ್ಲುಗಳು ರಾಜಸ್ಥಾನದಿಂದ ಸೌಖ್ಯವನಕ್ಕೆ ಬಂದಿವೆ. ಚಿಕಿತ್ಸೆಗೆ ತಗುಲಿದ ಒಟ್ಟೂ ವೆಚ್ಚ ಒಂಭತ್ತು ಲಕ್ಷ ರೂ.ಗಳೆಂದು ಸೌಖ್ಯವನದಲ್ಲಿ ಪ್ರಾರಂಭದಿಂದಲೂ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿರುವ ಪ್ರವೀಣ್ ಕುಮಾರ್ ತಿಳಿಸುತ್ತಾರೆ.

ಯುವಕರು, ಮುದುಕರು, ಮಹಿಳೆಯರು ಹೀಗೆ ಎಲ್ಲ ವರ್ಗಗಳ ಸಾಧಕರು ಅನುವರ್ತನ ಚಿಕಿತ್ಸೆಯನ್ನು ಕೊಂಡಾಡುತ್ತಾರೆ. ಮುಂಬಯಿಯಲ್ಲಿ ಹಡಗಿನ ಉದ್ದಿಮೆ ನಡೆಸುತ್ತಿರುವ ತುಷಾರ್ ಶೆಟ್ಟಿ (ವರ್ಷ 32) ಅನುವರ್ತನ ಚಿಕಿತ್ಸೆಗಾಗಿಯೇ ಸೌಖ್ಯವನಕ್ಕೆ ಬರುತ್ತಿರುತ್ತಾರೆ. ಬೆಂಗಳೂರಿನಲ್ಲಿ ಕೆನರಾ ಬ್ಯಾಂಕಿನಲ್ಲಿ ಆಫೀಸರ್ ಆಗಿ ಕೆಲಸ ಮಾಡುತ್ತಿರುವ ಶ್ರೀಪತಿ ಐತಾಳ್ (ವ.50) ತಮ್ಮ ಬೆನ್ನುನೋವು, ರಕ್ತದ ಒತ್ತಡ ಸಮಸ್ಯೆಗಳಿಗೆ ಅನುವರ್ತನ ಚಿಕಿತ್ಸೆ ಪರಿಹಾರ ನೀಡಿದ್ದನ್ನು ಸಲೀಸಾಗಿ ನನಗೆ ತಿಳಿಸಿದ್ದಾರೆ. ನಿಟ್ಟೆಯಲ್ಲಿ ಎಂ. ಬಿ.ಎ. ವಿದ್ಯಾರ್ಥಿನಿಯಾದ ವೈಷ್ಣವಿ (ವ.23) ಅನುವರ್ತನ ಚಿಕಿತ್ಸೆಯಿಂದ ಆರೋಗ್ಯ ಸುಧಾರಿಸಿಕೊಂಡ ಬಗೆಯನ್ನು ನಗುಮುಖದೊಂದಿಗೆ ವಿವರಿಸಿದ್ದಳು. ಅವಳ ತಾಯಿ ಉಷಾ (ವ. 46) ತನಗಿರುವ ವಾತ ರೋಗಕ್ಕೆ ಚಿಕಿತ್ಸೆ ಪರಿಹಾರ ಒದಗಿಸಿದ್ದನ್ನು ಒಪ್ಪಿಕೊಂಡಿದ್ದಾರೆ.

ಅನುವರ್ತನ ಚಿಕಿತ್ಸೆ ಇಷ್ಟೊಂದು ಪ್ರಯೋಜನಕಾರಿಯಾಗಲು ಸೌಖ್ಯವನದಲ್ಲಿರುವ ಕ್ಷಮತೆಯುಳ್ಳ ನಿರ್ವಹಣೆಯೇ ಕಾರಣ. ಇದು ಅನೇಕ ಸಾಧಕರ ಅನುಭವ ಎನ್ನುವುದು ನಿರ್ವಿವಾದ.

*PAGE DONATED BY : **SHRI N. R. HEGDE**, DOMBIVLI*

# VEDIC WAY

✍ Uday Koppikar

***Susvagatam! Hearty Welcome!***



One of the arguments put forth by votaries of the superiority of modern science and knowledge ambits is that our traditions are mostly well past their 'sellby' date and anyway, it is primarily 'mythology' that is central to it all. Nothing can be further from the truth. Sustained indoctrination through relentless schooling of impressionable minds further fortifies this evident untruth. When the anomaly is sought to be set right, there is a concerted and orchestrated hue and cry by pliant media having their own axes to grind.

Modern science is tantamount to seeking viable proof of phenomena which just cannot be tangible in physical realms but existcompletely palpable in esoteric spiritual dimensions. Whereas true science accepts the role Elements of Intuition play in scientific enquiry, our minds have been so conditioned that we presume only that which can be 'proved' in the laboratory, is Science. So, whatever Vedic seers have revealed is indirectly pooh-poohed by those worthies who have not been quite so fortunate as to be privy to its wonderfully edifying influence.

At an international meet of educationists it so happened that a fellow Indian spoke to me in a rather derogatory fashion about Vedas and Vedic wisdom. He opined that it was mere unscientific mumbo-jumbo of just a few thousand years vintage, since written scripts were only of comparatively recent origin. Further, he waxed eloquent about the 'provable' scientific advances of modern agevis-à-vis the lore of the Vedic 'Scriptures' (his words, not mine) which were in a language (Sanskrit) which was in the same league as say Greek and Latin. He also belittled our magnificent oral tradition of imparting Vedas to truly worthy students and transfor ming them into Vedic Masters. In short, he denigrated all matters which were of ancient Indian origin. And he was a 'Hindu' to boot!

A patient hearing later, one ventured to shed some light on his ignorance that he paraded as absolute knowledge. One pointed out to this worthy that Vedas are NOT 'scriptures' since they are APAURUSIYA (without any human element as author) and constitute divine revelations encapsulating pulsating vibrations of Creation. Scriptures (holy books) may well be sacred but are NOT apaurusiya as the Vedas happen to be. Besides, they SIMPLY DO NOT ENCAPSULATE cosmic vibrations. Vedas are the cosmic foundation of Sanatana Dharma or Hinduism.

With respect to the unbroken oral tradition of transforming deserving students into Vedic Masters spanning countless millennia, now internationally accepted to be a World Heritage, one pointed out that the Vedic riksand suktas were meant to be RECITED and NOT simply read as one would read a book or article. Then with great humility, one sought to know from this worthy whether with superb modern tools of Western Science at his disposal, he could replicate vibrations in a written script without recourse to oral methods and if so, would he be so kind as to enlighten this ignoramus about it. Needless to say, he made a hasty exit.

Indeed, it is only sufficient to HEAR Vedic mantras recited sonorously at havansand homams by qualified priests in the manner stipulated by the Vedic seers themselves to experience the powerful vibrations generated thereby. If one may submit, Science in the Vedas is NOTmere Science as we understand it today; it is SUPERSCIENCE of the Cosmos!

We shall consider an example of the fantastic foresight and cosmic vision of the seers. We add the syllable OM to most of the mantras at the beginning as also the end. It is important to note that it is OM and NOTAUM since pronunciation is OM, albeit the syllable itself is deemed to consist of three elements,A, U and M. OM is the WORD, the beginning of Creation. It is NAADABRAHMA, cosmic sound pervading Creation.

Now, no matter how we WRITE this syllable, be it Nagariscript or in any other script whatsoever, the precise sound it is meant to produce can be replicated ONLY when we are ORALLY TAUGHT to recite it properly.

Now, the super-science of the Vedic seers that we are only now beginning to understand using tools of modern science, is proven beyond doubt about the NAADABRAHMA, our wonderful OM. In deep Outer Space, modern instruments detected an ongoing continual sound due to vibrations that was uncannily like OM-KAR pronounced by qualified adepts as per Vedic stipulations. Can we call this mere coincidence? If we do so, it only highlights the depth of our own ignorance, if one may submit.

Vedic methods are EXPERIENTIAL and impart knowledge through experience whereas modern scientific methods are EXPERIMENTAL and usually convoluted. Like learning everything about sweetness of sugar without ever TASTING it! We will stop here. So, Friend, till we meet again next month and even thereafter, SHUBHAM BHAVATU! May Good Prevail! KALYANAMASTU! May Total Weal Manifest!

[Reproduced with permission from "Vedic Way"; copyright vests with the author. All rights reserved.]

# ಹವ್ಯಕ ಹಿತೇಚ್ಛು - ಕನ್ನಡ ಹಿತೇಚ್ಛು

✍ ನಾರಾಯಣ ಶಾನಭಾಗ, ಬೆಂಗಳೂರು

ಇಬ್ಬರೂ ಅಪ್ಪಟ ಹವ್ಯಕರು. ಇಬ್ಬರೂ ಅನನ್ಯ ಸಾಧಕರು. ಇಬ್ಬರ ಜನ್ಮಭೂಮಿ ಕನ್ನಡದ ನೆಲದಲ್ಲಿ ಆದರೆ ಕರ್ಮಭೂಮಿ ಮರಾಠಿಯ ನೆಲದಲ್ಲಿ. ಒಬ್ಬರು ಸುಮಾರು ಒಂದೂಕಾಲು ಶತಮಾನದ ಹಿಂದೆ ಬಾಳಿ ಬೆಳಗಿದ ಹವ್ಯಕ ಹಿತೇಚ್ಛು. ಇವರ ಜನ್ಮಭೂಮಿ ಹೊನ್ನಾವರ ತಾಲೂಕಿನ ಕಡಲತಡಿಯ ಕರ್ಕಿಗ್ರಾಮ. ಇನ್ನೊಬ್ಬರು ಇಂದಿಗೂ ನಮ್ಮ ಮಧ್ಯೆ ಎಲೆಮರೆಯ ಕಾಯಿಯಂತೆ ದೂರದ ಪುಣೆಯಲ್ಲಿ ನಿವೃತ್ತರಾದರೂ ಪ್ರವೃತ್ತಿ ಜೀವನ ನಡೆಸುತ್ತಿರುವ ಕನ್ನಡ ಹಿತೇಚ್ಛು. ಇವರ ಜನ್ಮಭೂಮಿ ಸಹ್ಯಾದ್ರಿಯ ಮಡಿಲಲ್ಲಿ ಇಂದಿಗೂ ಶಾಂತವಾಗಿರುವ ಸಾಲಕೋಡು ಗ್ರಾಮ ಹೊನ್ನಾವರ ತಾಲೂಕು.

ಸುಂದರವಾದ ಕನಸುಗಳನ್ನು ಕಾಣುವುದು ಉತ್ತಮ ಆರೋಗ್ಯದ ಲಕ್ಷಣ. ಕನಸುಗಳ ಸಾಕಾರಕ್ಕಾಗಿ ನಿರಂತರ ಶ್ರಮಿಸುವುದು ಜೀವಂತಿಕೆಯ ಲಕ್ಷಣ. ಬಡತನದ ಬೇಗೆಯಲ್ಲಿ ಹುಟ್ಟಿ ಬೆಳೆದ ಇಬ್ಬರೂ ಎಳವೆಯಲ್ಲಿಯೇ ಕನಸು ಕಂಡವರು. ಅವುಗಳ ಸಾಕಾರಕ್ಕಾಗಿ ಛಲದಂಕಮಲ್ಲರಾಗಿ ತಾವೇ ತಮ್ಮ ಕರ್ಮಭೂಮಿಯನ್ನು ಆಯ್ದುಕೊಂಡವರು. ಈ ಇಬ್ಬರು ಸಾಧಕರ ಜೀವನ ಕಾರ್ಯಗಳ ಸಂಕ್ಷಿಪ್ತ ನೋಟವೇ ಈ ಲೇಖನದ ಆಶಯ.

ಕರ್ನಾಟಕ ಮತ್ತು ಮಹಾರಾಷ್ಟ್ರಗಳು ಶತಮಾನ ಕಾಲದಿಂದ ಸಂಸ್ಕೃತಿ, ಸಾಹಿತ್ಯ ಮತ್ತು ಭಾಷೆಗಳ ದೃಷ್ಟಿಯಿಂದ ಪರಸ್ಪರ ನಿಕಟ ಸಂಬಂಧ ಹೊಂದಿವೆ. ಕರ್ನಾಟಕದ ಬಿಜಾಪುರ, ಬೆಳಗಾವಿ, ಧಾರವಾಡ ಮತ್ತು ಕಾರವಾರ (ಉತ್ತರ ಕನ್ನಡ) ಜಿಲ್ಲೆಗಳು 1956ರ ಪೂರ್ವದಲ್ಲಿ ಮುಂಬಯಿ ಪ್ರಾಂತದ ಭಾಗವಾಗಿದ್ದವು. ಈ ಜಿಲ್ಲೆಗಳ ವಿದ್ಯಾರ್ಥಿಗಳು ಉಚ್ಚ ಶಿಕ್ಷಣಕ್ಕಾಗಿ ಮತ್ತು ಉದ್ಯೋಗಕ್ಕಾಗಿ ಪುಣೆ- ಮುಂಬಯಿಗಳಿಗೆ ಹೋಗುವುದು ಸಾಮಾನ್ಯವಾಗಿತ್ತು. ಕೆಲವರು ಮುಂಬಯಿ ಪ್ರಾಂತದ ವಿವಿಧ ಸರಕಾರಿ ಕಚೇರಿಗಳಲ್ಲಿ ನೌಕರಿ ದೊರಕಿಸಿಕೊಂಡರೆ ಕೆಲವರು ಶಾಲಾ ಕಾಲೇಜುಗಳಲ್ಲಿ ಅಧ್ಯಾಪಕರಾದರು. ನ್ಯಾಯಾಲಯದಲ್ಲಿ ನ್ಯಾಯವಾದಿಗಳಾದರು, ನ್ಯಾಯಾಧೀಶರೂ ಆದರು. ಕೆಲವರು ಸ್ವಂತ ಉದ್ಯೋಗಿಗಳಾದರು. ಕ್ರಮೇಣ ಬೆಳಗಾವಿ, ಧಾರವಾಡ, ವಿಜಾಪುರಗಳಲ್ಲಿ ಕಾಲೇಜುಗಳು ಪ್ರಾರಂಭವಾದವು. ಧಾರವಾಡದಲ್ಲಿ ಕರ್ನಾಟಕ ವಿಶ್ವವಿದ್ಯಾಲಯವೂ ಸ್ಥಾಪನೆಯಾಯಿತು. ಉತ್ತರ ಕನ್ನಡ ಜಿಲ್ಲೆಯ ಮೊದಲನೇ ಕಾಲೇಜು ಪ್ರಾರಂಭವಾದುದು 1948ರಲ್ಲಿ ಕುಮಟಾದಲ್ಲಿ.

ಅಂದಿನ ದಿನಗಳಲ್ಲಿ ಉತ್ತರ ಕನ್ನಡ ಜಿಲ್ಲೆಯ ಬ್ರಾಹ್ಮಣರು ಅದರಲ್ಲಿಯೂ ಹವ್ಯಕರು ಶಿಕ್ಷಣ ಪಡೆಯುವಲ್ಲಿ ಮುಂಚೂಣಿಯಲ್ಲಿದ್ದರು.



**ಹವ್ಯಕ ಹಿತೇಚ್ಛು** : ಹೊನ್ನಾವರ ತಾಲೂಕಿನ ಕರ್ಕಿ ಗ್ರಾಮದ ಸೂರಿ ಮನೆತನ ಹಿಂದಿನಿಂದಲೂ ತುಂಬಾ ಪ್ರಸಿದ್ಧ. ಆ ಮನೆತನದ ನಾರಾಯಣ ಮತ್ತು ಪರಮೇಶ್ವರಿ ದಂಪತಿಗಳ ಮೊದಲನೇ ಮಗ ವಿಘ್ನೇಶ್ವರ. ಎರಡನೇ ಮಗ ವೆಂಕಟರಮಣ ತುಂಬಾ ಚೂಟಿ. ಹಟವಾದಿ (ಕಾಲ ಸು.1852-92) ಕರ್ಕಿ, ಹೊಸನಗರದ ರಾಮಚಂದ್ರಾಪುರ



ಮಠಗಳಲ್ಲಿ ಶಿಕ್ಷಣ ಪಡೆದು, ಕೆಲಕಾಲ ಮಠದಲ್ಲಿಯೇ ವ್ಯವಸ್ಥಾಪಕನಾಗಿ, ಅದನ್ನು ಬಿಟ್ಟು ಮೈಸೂರು ಪೊಲೀಸ್ ಇಲಾಖೆಯಲ್ಲಿ ಸ್ವಲ್ಪ ಕಾಲ ದುಡಿದು, ಅದೂ ಸರಿಬರದೇ ರಾಜೀನಾಮೆ ನೀಡಿ, ಸುಂದರ ಕನಸು ಕಾಣುತ್ತ ಕ್ರಿ.ಶ. 1880 ರ ದಶಕದ ಹೊಸ್ತಿಲಲ್ಲಿ ಮುಂಬಯಿ ಸೇರಿದ. ಆ ದಶಕದುದ್ದಕ್ಕೂ ಅದೇ ಕರ್ಮಭೂಮಿಯೂ ಆಯಿತು. ಅದಾಗಲೇ ಮುಂಬಯಿ ಸೇರಿದ ತವರು ಜಿಲ್ಲೆಯ ಹಿರಿಯರ ಒಡನಾಟ ದೊರೆಯಿತು. ಅವರ ಸಹಕಾರದಿಂದ ಒಂದು ವಾರಪತ್ರಿಕೆ ಪ್ರಾರಂಭವಾಯಿತು. ಕ್ರಿ. ಶ. 1885ನೇ ನವೆಂಬರ್ 3ನೇ ತಾರೀಕು ಮಂಗಳವಾರ ಐತಿಹಾಸಿಕ ದಿನವಾಯಿತು. 'ಹವ್ಯಕ ಸುಬೋಧ ಮತ್ತು ಕಾರವಾರ ಚಂದ್ರಿಕೆ' ವಾರಪತ್ರಿಕೆಯ ಮೊದಲನೇ ಸಂಚಿಕೆ ಹೊರಬಂದಿತು. ನಾಲ್ಕು ಪುಟಗಳ ಪತ್ರಿಕೆಯ ಕೊನೆಯಲ್ಲಿ ಈ ಪತ್ರವು ಕರ್ಕಿ ಬೂ. ಮಾ. ಭಟ್ಟರು ಪ್ರೊಪ್ರಾಯಿಟರ್ ಹ.ಸು. ಇವರಿಗೋಸ್ಕರ ಮಂಗೇಶ ಶಾಂತಪ್ಪಾ ನಾಡಕರ್ಣಿ ಇವರಿಂದ ಮುಂಬಯಿ ಕರ್ನಾಟಕ ಛಾಪಖಾನೆಯಲ್ಲಿ ಛಾಪಿಸಲ್ಪಟ್ಟಿತು' ಎಂದಿದೆ. ಇದೇ ಪುಟದ ಎರಡನೇ ಕಾಲಮಿನ ಪ್ರಕಟಣೆಯೊಂದರ ಕೊನೆಯಲ್ಲಿ 'ಕರ್ಕಿ ವೆಂಕಟರಮಣ ಶಾಸ್ತ್ರಿ ಸೂರಿ ಎ.ಹ. ಸುಬೋಧ ಠಾಕುರ್‌ದ್ವಾರ ಮುಂಬಯಿ' ಎಂದಿದೆ. ದೂರದ ಮುಂಬಯಿಯಲ್ಲಿ ಹೊರಟ ಪತ್ರಿಕೆಯ ಹೆಸರು 'ಹವ್ಯಕ' ಶಬ್ದದಿಂದ ಪ್ರಾರಂಭವಾದುದು ಸೂರಿ ವೆಂಕಟರಮಣ ಶಾಸ್ತ್ರಿಗಳ ಉತ್ಕಟ ಹವ್ಯಕಾಭಿಮಾನಕ್ಕೆ ಜ್ವಲಂತ ಸಾಕ್ಷಿ. ಹವ್ಯಕರ ಪ್ರಪ್ರಥಮ ವಾರಪತ್ರಿಕೆ ಎಂಬ ಹೆಗ್ಗಳಿಕೆಯೂ ಇದಕ್ಕೆ ಇದೆ. ಶಾಸ್ತ್ರಿಗಳು ಹವ್ಯಕ ಪತ್ರಿಕಾ ಪಿತಾಮಹರಾದರು.

ಅಂದಿನ ದಿನಗಳಲ್ಲಿ ಗ್ರಂಥ ಸಂಪಾದನೆ ಎಂಬುದು ದೊಡ್ಡ ಸವಾಲಾಗಿತ್ತು. ಶಾಸ್ತ್ರಿಗಳು ಗ್ರಂಥ ಸಂಪಾದನೆ, ಪ್ರಕಟಣೆಗಳನ್ನೂ ಕೈಗೊಂಡರು. ಹವ್ಯಕರ ಪ್ರಪ್ರಥಮ ಮಹಾಕವಿ ಶಿವಮೊಗ್ಗ ಜಿಲ್ಲಾ ಹೊಸನಗರ ತಾಲೂಕಿನ ಸುಳಿಗೋಡಿನ ಪರಮದೇವನ ಕಾಲ 1721-1805. ಕೃತಿ 'ತುರಂಗ ಭಾರತ' ಎಂಬ ತುರಂಗ ಷಟ್ಪದಿ ಮಹಾಕಾವ್ಯ. ಹವ್ಯಕರಲ್ಲಿ ಪ್ರಥಮ ಮಹಿಳಾ ಸಾಹಿತಿ ಸಾಗರ ಪ್ರಾಂತದ ಕಿಬ್ಬಚ್ಚಲಿನ ಮಂಜಮ್ಮ. ಕಾಲಮಾನ ಸು.1830-1890. ಕೃತಿ 'ವೇದಾಂತ ತತ್ವಸಾರ' ಎಂಬ ಯಕ್ಷಗಾನ ಪ್ರಸಂಗ. ಉಡುಪಿ ತಾಲೂಕಿನ ಬ್ರಹ್ಮಾವರದ ಕರಣಿಕ ಸೂರಪ್ಪಯ್ಯನವರ ಅಗ್ರಹಾರದ ವೆಂಕಟೇಶ ಭಟ್ಟರು ಹವ್ಯಕರಲ್ಲಿ ವೈದಿಕ ವಿದ್ಯಾ ಪಾರಂಗತರು. ಕಾಲ ಕ್ರಿ. ಶ. ಸು.1830. ವೈದಿಕ ಕರ್ಮಾಚರಣೆಗಳಿಗೆ ಅನುಕೂಲವಾಗುವಂತೆ ಇವರು ಸಂಕಲಿಸಿದ 'ಬೋಧಾಯನೀಯ ವೆಂಕಟೇಶಿ ಪ್ರಯೋಗ' ಒಂದು ಮೌಲಿಕ ಗ್ರಂಥ. ಈ ಮೂರು ಸೇರಿದಂತೆ ಒಟ್ಟಾರೆ ಸುಮಾರು 42 ಚಿಕ್ಕ ದೊಡ್ಡ ಗ್ರಂಥಗಳನ್ನು ಸಂಪಾದಿಸಿ 1880ರ ದಶಕದಲ್ಲಿ ಮುಂಬಯಿಯಿಂದ ಪ್ರಕಟಿಸುವ ಮಹತ್ಕಾರ್ಯ ಸಾಧಿಸಿದವರು ಸೂರಿ ವೆಂಕಟರಮಣ ಶಾಸ್ತ್ರಿಗಳು.

**ಇಗ್ಗಪ್ಪ ಹೆಗಡೆ ವಿವಾಹ ಪ್ರಹಸನ** : ಪತ್ರಿಕಾ ಸಂಪಾದನೆ, ಪುಸ್ತಕ ಸಂಪಾದನೆಗಳ ಜೊತೆಗೆ ಸ್ವತಂತ್ರ ಕೃತಿಗಳ ರಚನೆಯೂ ಶಾಸ್ತ್ರಿಗಳಿಂದ ನಡೆದಿತ್ತು. ದಕ್ಷಿಣ ಯಾತ್ರಾ ಚರಿತ್ರೆ (1885) ಎಂಬುದು ಕನ್ನಡದ ಪ್ರಪ್ರಥಮ ಪ್ರವಾಸ ಸಾಹಿತ್ಯ ಗದ್ಯಕೃತಿ. ಪ್ರಾಚೀನ ನಾಟ್ಯಕಥಾರ್ಣವ ಭಾಗ-1(1888)

ಇದು ನಾಲ್ಕು ಸಂಸ್ಕೃತ ನಾಟಕಗಳ ಭಾವಾನುವಾದ ಸಂಕಲನ. ಅನಾರ್ಯರ ವಿವರ (1889) ಇದು ಸಮಾಜದಲ್ಲಿ ಶೂದ್ರರ ಸ್ಥಾನ ಪರಿಚಯಿಸುವ ಕೃತಿ. ಈ ಮೂರು ಸ್ವತಂತ್ರ ಕೃತಿಗಳ ಜೊತೆಗೆ ಕ್ರಿ.ಶ. 1887ರಲ್ಲಿ ಅದೇ ಮುದ್ರಣಾಲಯದಿಂದ 'ಇಗ್ಗಪ್ಪ ಹೆಗಡೆ ವಿವಾಹ ಪ್ರಹಸನ' ಎಂಬ ನಾಟಕ ಪ್ರಕಟಗೊಂಡಿದೆ. ಕೃತಿಕಾರ ಹವ್ಯಕ ಹಿತೇಚ್ಛು ಎಂದಿದೆ. ಇದೊಂದು ಗುಪ್ತನಾಮ. ನಾಟಕವು ಹವ್ಯಕರ ಆಡುನುಡಿ-ತಾಯ್ನುಡಿಯಲ್ಲಿರುವ ಆದ್ಯ ಕೃತಿ. ಇದು ಕನ್ನಡ ಸಾಹಿತ್ಯದ ಪ್ರಪ್ರಥಮ ಸ್ವತಂತ್ರ ಸಾಮಾಜಿಕ ನಾಟಕ ಎಂಬ ಗೌರವಕ್ಕೆ ಪಾತ್ರವಾಗಿದೆ ಎಂಬುದು ಸಮಗ್ರ ಹವ್ಯಕ ಸಮಾಜಕ್ಕೆ ಹೆಮ್ಮೆಯ ಸಂಗತಿ.

ಈ ಕೃತಿಕರ್ತ ಯಾರು ಎಂಬುದು ಸುಮಾರು 66 ವರ್ಷಗಳ ಕಾಲ ನಿಗೂಢವಾಗಿಯೇ ಇತ್ತು. ಸಂಶೋಧಕರೂ ಪ್ರಾಧ್ಯಾಪಕರೂ ಆದ ಪ್ರೊ. ಲಿಂಗೇಶ ಶರ್ಮಾ ಕಲ್ಲಬ್ಬೆ ಕುಮಟಾ (1925-88) ಇವರು ಈ ಕುರಿತು ಹುಡುಕಾಡಿ ಕೃತಿಕಾರರು ಸೂರಿ ವೆಂಕಟರಮಣ ಶಾಸ್ತ್ರಿಗಳೇ ಎಂದು 1953ರಲ್ಲಿ ಸಾರಿದರು. ಕೃತಿಯು ಸೂಕ್ತ ಪ್ರಸ್ತಾವನೆ ಸಹಿತ ಅದೇ ವರ್ಷ ಮರುಮುದ್ರಣಗೊಂಡಿತು. ಕರ್ನಾಟಕ ವಿಶ್ವವಿದ್ಯಾಲಯದ ಪ್ರಾಧ್ಯಾಪಕಿ ಡಾ. ಶಾಲಿನಿ ರಘುನಾಥ ಭಟ್ಟರು ಈ ನಾಟಕದ ಕುರಿತು ಆಳವಾದ ಅಧ್ಯಯನ ನಡೆಸಿದರು. ಅಧ್ಯಯನ ಪ್ರಬಂಧ, ಮೂಲಪಾಠ ಮತ್ತು ಹೊಸಗನ್ನಡ ಅವತರಣಿಕೆ ಸಹಿತ 'ಇಗ್ಗಪ್ಪ ಹೆಗಡೆ ವಿವಾಹ ಪ್ರಹಸನ ಒಂದು ಅಧ್ಯಯನ' ಗ್ರಂಥ 1988ರಲ್ಲಿ ಮುದ್ರಣಗೊಂಡಿದ್ದು ಗಮನಾರ್ಹವಾಗಿದೆ. ನಾಟಕವು ಆಡುನುಡಿಯಲ್ಲಿಯೇ ಅನೇಕ ವೇದಿಕೆಗಳಲ್ಲಿ ರಂಗಪ್ರಯೋಗಗೊಂಡಿದೆ. ಈಗಲೂ ಪ್ರಯೋಗಗೊಳ್ಳುತ್ತಿದೆ. ಇದು 2013 ರಲ್ಲಿ ಮತ್ತೊಮ್ಮೆ ಬೆಂಗಳೂರಿನಲ್ಲಿ ಮುದ್ರಣಗೊಂಡಿದೆ. ಅಮೆರಿಕಾದ ನ್ಯೂಯಾರ್ಕ್ ಸ್ಟೇಟ್ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿರುವ ಡಾ. ನಾರಾಯಣ ವಿ. ಹೆಗಡೆ ದೊಡ್ಮನೆ ಇವರು ಇದನ್ನು ಇಂಗ್ಲೀಷಿಗೆ ಅನುವಾದಿಸಿದ್ದಾರೆ. ಇದು 'Indian Literature' ನಿಯತಕಾಲಿಕ ಮಾರ್ಚ್-ಎಪ್ರಿಲ್ 2012ರ ಸಂಚಿಕೆಯಲ್ಲಿ ಪ್ರಕಟಗೊಂಡಿದೆ. ಇದರಿಂದಾಗಿ ಹವ್ಯಕರ ಆಡುನುಡಿಯಲ್ಲಿರುವ ಪ್ರಹಸನವು ಜಾಗತಿಕ ನೆಲೆಯಲ್ಲಿ ಗುರುತಿಸಿಕೊಂಡಂತಾಗಿದೆ. ಹವ್ಯಕರ ತಾಯ್ನುಡಿ-ಕನ್ನಡದ ಪ್ರಧಾನ ಉಪಭಾಷೆಗಳಲ್ಲಿ ಒಂದಾಗಿದೆ. ಇದು ಹಳೆಗನ್ನಡದ ಅನೇಕ ಪ್ರಯೋಗಗಳನ್ನು ಇಂದಿಗೂ ಉಳಿಸಿಕೊಂಡು ಬಂದಿರುವ ಏಕೈಕ ಆಡುನುಡಿ. ಈ ನುಡಿಗೆ 'ಹವಿಗನ್ನಡ' ಎಂಬ ಚೆಂದದ ಹೆಸರನ್ನು 2006ನೇ ಇಸ್ವಿ ಡಿಸೆಂಬರ್ 25 ರಂದು ಹೊನ್ನಾವರದ ಹವ್ಯಕ ಭವನದಲ್ಲಿ ನಡೆದ ಪ್ರಪ್ರಥಮ ಹವಿಗನ್ನಡ ಸಾಹಿತ್ಯ ಸಮ್ಮೇಳನದಲ್ಲಿ ದೃಢಪಡಿಸಲಾಗಿದೆ. ಡಾ. ಹರಿಕೃಷ್ಣ ಭರಣ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿದ್ದರು.

ಶಾಸ್ತ್ರಿಗಳ 'ಹವ್ಯಕ ಸುಬೋಧ' ವಾರಪತ್ರಿಕೆಯಲ್ಲಿ ಆಂಗ್ಲ ಅಧಿಕಾರಿಗಳ ದರ್ಪ, ದೌರ್ಜನ್ಯಗಳನ್ನು ಖಂಡಿಸುವ ಲೇಖನಗಳು ನಿರಂತರವಾಗಿ ಪ್ರಕಟವಾಗುತ್ತಿದ್ದವು. ಪತ್ರಿಕೆ ಜನಾನುರಾಗ ಗಳಿಸಿತ್ತು. ಆದರೆ ಆಂಗ್ಲ ಅಧಿಕಾರಿಗಳ ಕೆಂಗಣ್ಣಿಗೆ ಗುರಿಯಾಯಿತು ಮತ್ತು ಅವರ ನಿರಂತರ ಕಿರುಕುಳದಿಂದಾಗಿ 1887ರಲ್ಲಿ ನಿಲ್ಲುವಂತಾಯಿತು. ಶಾಸ್ತ್ರಿಗಳು ಎದೆಗುಂದದೇ 'ಹಿತೋಪದೇಶ' ಎಂಬ ಮಕ್ಕಳ ಮಾಸಪತ್ರಿಕೆ ಪ್ರಾರಂಭಿಸಿದರು. ಇದು 1888 ಜನವರಿ ತಿಂಗಳಿಂದ ಸೆಪ್ಟೆಂಬರ್ ತನಕ ಒಂಭತ್ತು ತಿಂಗಳು ಪ್ರಕಟಣೆ ಕಂಡು ಕಾರಣಾಂತರಗಳಿಂದ ನಿಲ್ಲುವಂತಾಯಿತು. ಪತ್ರಿಕೆ ಜೊತೆಯಲ್ಲೇ ಪುಸ್ತಕ ಪ್ರಕಟಣೆ ಸಾಗಿತ್ತು. ಸಂಪಾದಿತ ಕೃತಿಗಳಾದ ಕಾರ್ತವೀರ್ಯಾರ್ಜುನ, ರೇವತಿ ಕಲ್ಯಾಣ ಯಕ್ಷಗಾನ ಪ್ರಸಂಗಗಳು ಮತ್ತು ತುರಂಗ ಭಾರತ ಮಹಾಕಾವ್ಯ ಇವು 1889ರಲ್ಲಿ ಪ್ರಕಟಗೊಂಡವು. ಅದರ ನಂತರ ಪ್ರಕಟಗೊಂಡ ಕೃತಿಗಳು ಕಂಡುಬಂದಿಲ್ಲ. ಕಾರಣಾಂತರಗಳಿಂದ ಹಿನ್ನೆಲೆಗೆ ಸರಿದ ಶಾಸ್ತ್ರಿಗಳು 1892ರಲ್ಲಿ ಸದ್ಗತಿ ಸೇರಿದರು. ದಣಿವರಿಯದ ಕ್ರಿಯಾಶೀಲ ಸಾಧಕ 40ರ ವಯಸ್ಸಿನಲ್ಲಿಯೇ ಕಣ್ಮರೆಯಾದುದು ಕನ್ನಡಿಗರ ಅದರಲ್ಲೂ ಹವ್ಯಕರ ದುರ್ದೈವ.

ಶಾಸ್ತ್ರಿಗಳ ಒಬ್ಬನೇ ಮಗ ವಿನಾಯಕನ ಜನನ 1886ರಲ್ಲಿ. ತಂದೆಯ ನಿಧನಾ ನಂತರ ಸಹೃದಯರ ಸಹಾಯದಿಂದ ಶಿಕ್ಷಣ ಪೂರೈಸಿ ಕಾರವಾರದ ಕಂದಾಯ ಇಲಾಖೆಯಲ್ಲಿ ಕೆಲಸಕ್ಕೆ ಸೇರಿದ. 1905ರಲ್ಲಿ ಕಾರವಾರದಿಂದ 'ವಿನೋದಿನಿ' ಮಾಸಪತ್ರಿಕೆ ಪ್ರಾರಂಭಿಸಿದ ಕೀರ್ತಿಗೆ ಪಾತ್ರನಾದ. ತೀವ್ರ ಅನಾರೋಗ್ಯದಿಂದ 1906ನೇ ಮೇ ತಿಂಗಳ 11ರಂದು ಅಕಾಲ ಮರಣಕ್ಕೆ ತುತ್ತಾದ. ಕೆಲಕಾಲದ ನಂತರ ಪತ್ರಿಕೆಯೂ ನಿಂತಿತು. ಕರ್ಕಿ ಸೂರಿ ಮನೆತನದ ಪ್ರತಿಭಾನ್ವಿತ ಕವಲು ಮುಂದರಿಯದೇ ಹೋದುದು ವಿಷಾದನೀಯ.

ಹವ್ಯಕ ಹಿತೇಚ್ಛು ಕರ್ಕಿ ಸೂರಿ ವೆಂಕಟರಮಣ ಶಾಸ್ತ್ರಿಗಳು ಅಪ್ರತಿಮ ಪ್ರತಿಭಾವಂತರು. ಹಟವಾದಿಗಳು, ಸಂಶೋಧಕರು, ಗ್ರಂಥ ಸಂಪಾದಕರು, ಗ್ರಂಥಕಾರರು, ಪತ್ರಿಕೋದ್ಯಮಿಗಳು, ಪ್ರಕಾಶಕರು, ಹವ್ಯಕ ಸಮಾಜದಲ್ಲಿ ಪ್ರಾತಃ ಸ್ಮರಣೀಯರು. ಇವರ ಸ್ಮರಣಾರ್ಥ ಶ್ರೀ ಅಖಿಲ ಹವ್ಯಕ ಮಹಾಸಭೆಯ ಹವ್ಯಕ ಅಧ್ಯಯನ ಕೇಂದ್ರವು 2004ರಲ್ಲಿ 'ಹವಿಗನ್ನಡ ಸೂರಿ ಪ್ರಶಸ್ತಿ' ಸ್ಥಾಪಿಸಿದೆ. ಪ್ರಶಸ್ತಿಯನ್ನು ಅದೇ ವರ್ಷದಿಂದ ಅನಿಯಮಿತವಾಗಿ ಖ್ಯಾತ ಹವಿಗನ್ನಡ ಗ್ರಂಥಕಾರರಿಗೆ ನೀಡಲಾಗುತ್ತಿದೆ. ಹವಿಗನ್ನಡ ಸಾಹಿತ್ಯ ಚರಿತ್ರಕಾರರೂ, ಹವಿಗನ್ನಡ ಗ್ರಂಥಕರ್ತರೂ ಸಂಶೋಧಕರೂ ಆದ ಡಾ. ಹರಿಕೃಷ್ಣ ಭರಣ್ಯರಿಗೆ 2004ರಲ್ಲಿ ಪ್ರಪ್ರಥಮ ಹವಿಗನ್ನಡ ಮಹಾಕಾವ್ಯ ಕರ್ತ ಬಾಳಿಲ ಪರಮೇಶ್ವರ ಭಟ್ಟರಿಗೆ 2005ರಲ್ಲಿ ಮತ್ತು ಪ್ರಥಮ ಹವಿಗನ್ನಡ ಕಾದಂಬರಿಕಾರ್ತಿ ಡಾ. ಸಬಿತಾ ಮರಕ್ಕಿಣಿಯವರಿಗೆ 2008ರಲ್ಲಿ ಈ ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ಮುಂಬಯಿಯ ಹವ್ಯಕ ವೆಲ್‌ಫೇರ್ ಟ್ರಸ್ಟ್ 2006ರಿಂದ ವಾರ್ಷಿಕವಾಗಿ 'ಕರ್ಕಿ ವೆಂಕಟರಮಣ ಶಾಸ್ತ್ರಿ ಸೂರಿ ಪ್ರಶಸ್ತಿ' ಪ್ರದಾನ ಮಾಡುತ್ತಿದೆ. ಕ್ರಿ.ಶ. 1964ರಲ್ಲಿ ಪ್ರಾರಂಭವಾದ ಹವ್ಯಕ ವೆಲ್‌ಫೇರ್ ಟ್ರಸ್ಟ್‌ನ Mumbai Havyaka Directory- 3rd Edition 2000ದ ಪ್ರಕಾರ ಸಂಸ್ಥೆಯಲ್ಲಿ ಸು. 1000 ಸದಸ್ಯರಿದ್ದು ಅದರಲ್ಲಿ ಉತ್ತರ ಕನ್ನಡದವರೇ ಸುಮಾರು 750 ಇದ್ದಾರೆ. ಇವರಲ್ಲಿ ಗೋಕರ್ಣ ಮತ್ತು ಕರ್ಕಿ ಈ ಎರಡು ಗ್ರಾಮ ಮೂಲದವರೇ ಕ್ರಮವಾಗಿ 175 ಹಾಗೂ 120 ಇದ್ದಾರೆಂಬುದು ಇವರ ಸಂಘಟನಾತ್ಮಕ ಕ್ರಿಯಾಶೀಲತೆಗೆ ನಿದರ್ಶನವಾಗಿದೆ.

ಹದಿನೆಂಟನೇ ಶತಮಾನದ ಉತ್ತರಾರ್ಧದಲ್ಲಿ ಬಾಳಿ ಬೆಳಗಿದ ಅಸಾಮಾನ್ಯ ಸಾಧಕ ಶಾಸ್ತ್ರಿಯವರ ವೈಯಕ್ತಿಕ ಜೀವನದ ಹೆಚ್ಚಿನ ವಿವರಗಳು ಕಾಲಗರ್ಭದಲ್ಲಿ ಅಲಭ್ಯವಾಗಿರುವುದು ವಿಷಾದಕರ. ಆದರೂ ಅಲ್ಪಸ್ವಲ್ಪ ಲಭ್ಯವಿರುವ ಮತ್ತು ಅವರ ಪತ್ರಿಕೋದ್ಯಮ, ಪುಸ್ತಕೋದ್ಯಮ ಮತ್ತು ಸ್ವರಚಿತ ಸಾಹಿತ್ಯ ಕುರಿತಂತೆ ಮೂವರು ಮಹನೀಯರು ಪ್ರತ್ಯೇಕ ಕೃತಿ ರಚಿಸಿರುವುದು ಗಮನಾರ್ಹ.


1. ಸೂರಿ ಸೌರಭ, ಲೇ : ಮೋಹನ್ ಗ. ಹೆಗಡೆ, ಸಾಗರ - 2012
2. ಸೂರಿ ವೆಂಕಟರಮಣ ಶಾಸ್ತ್ರಿ, ಲೇ : ಕೃ.ಶಿ. ಹೆಗಡೆ, ಪುಣೆ - 2012
3. ಸೂರಿ ಶಾಸ್ತ್ರಿ ತೆರೆದ ದಾರಿ. ಲೇ : ಕೃಷ್ಣಮೂರ್ತಿ ಹೆಬ್ಬಾರ ಕರ್ಕಿ - 2015

ಸಮಾಜ ಸುಧಾರಕ ಕರ್ಕಿ ವೆಂಕಟರಮಣ ಶಾಸ್ತ್ರಿ ಸೂರಿ ಕುರಿತು ಕೃ.ಶಿ. ಹೆಗಡೆಯವರು ಬರೆದ ಕೃತಿ ಬೆಂಗಳೂರಿನ ಹೇಮಂತ ಸಾಹಿತ್ಯದಿಂದ ಪ್ರಕಟಗೊಂಡಿದೆ. ಸೂರಿ ಶಾಸ್ತ್ರಿಗಳ ಸಂಕ್ಷಿಪ್ತ ಪರಿಚಯವಿದ್ದ ಈ ಕೃತಿಯಲ್ಲಿ ಶಾಸ್ತ್ರಿಗಳ ಮಾನವೀಯ ದೃಷ್ಟಿಯನ್ನು ಮಕ್ಕಳ ಮನಸ್ಸಿಗೆ ನಾಟುವಂತೆ ಚಿತ್ರಿಸಲಾಗಿದೆ. ಕೃ.ಶಿ. ಹೆಗಡೆಯವರ ಕನ್ನಡ ಪ್ರೀತಿ ಅನನ್ಯವೂ ವಿಶಿಷ್ಟವೂ ಆದದ್ದು. ಓರ್ವ ಕನ್ನಡಿಗನಾಗಿ ಮರಾಠಿ ನೆಲದಲ್ಲಿ ನಿಂತು ಕಳೆದ ಮೂರು ದಶಕಗಳಿಂದ ಮರಾಠಿ-ಕನ್ನಡ ಬಾಂಧವ್ಯವನ್ನು ಅನವರತವಾಗಿ ಬೆಸೆಯುತ್ತಿರುವ ನಿಟ್ಟಿನಲ್ಲಿ ಅನನ್ಯ ಕೃಷಿ ನಿರತ ಇವರನ್ನು ಕನ್ನಡ ಹಿತೇಚ್ಛು ಕೃಶಿ ಹೆಗಡೆ ಎಂದು ಈ ಲೇಖನದಲ್ಲಿ ಕರೆಯಲಾಗಿದೆ ಎಂಬುದು ವಿನಮ್ರ ವಿನಂತಿ.



**ಕನ್ನಡ ಹಿತೇಚ್ಛು ಕೃಶಿ ಹೆಗಡೆ :** ಹೊನ್ನಾವರ ತಾಲೂಕಿನ ಸಾಲಕೋಡಿನ ಕಲ್ಲರೆಯ ಕೃಷಿಕ ಕುಟುಂಬದ ಶಿವರಾಮ ಹೆಗಡೆ ಮತ್ತು ಕಮಲಾ ದಂಪತಿಗಳ ಸಂತಾನದಲ್ಲಿ ಬದುಕುಳಿದ 12 ಮಕ್ಕಳಲ್ಲಿ 8 ಗಂಡು ಮತ್ತು 4 ಹೆಣ್ಣು. 1945 ರಲ್ಲಿ ಜನಿಸಿದ ಮೂರನೇ ಮಗ ಕೃಷ್ಣ ಓದಿನಲ್ಲಿ ಮುಂದು. ಏಳನೇ ಇಯತ್ತೆ (ಮುಲ್ಕಿ) ಪರೀಕ್ಷೆಯಲ್ಲಿ ಹೊನ್ನಾವರ ಕೇಂದ್ರಕ್ಕೆ ಪ್ರಥಮನಾದ. ಸ್ವಪ್ರಯತ್ನದಿಂದ ಅರೇ ಅಂಗಡಿ ಹೈಸ್ಕೂಲಿನಿಂದ ಎಸ್.ಎಸ್.ಎಲ್. ಸಿ. ಪಾಸಾಗಿ, ಕುಮಟಾದ ಕೆನರಾ ಕಾಲೇಜಿನಲ್ಲಿ ಪದವಿ ಶಿಕ್ಷಣ ಗಳಿಸಿದ. ಅಂತಿಮ ವರ್ಷದ ಪರೀಕ್ಷೆ ಮುಗಿದ ದಿನವೇ ಕನಸು ಕಾಣುತ್ತ ಮುಂಬಯಿಗೆ ನಡೆದ. ಹೈಸ್ಕೂಲು ಶಿಕ್ಷಕನಾದ. ದುಡಿಯುತ್ತಲೇ ಓದಿದ ಮತ್ತು ಸ್ನಾತಕೋತ್ತರ ಪದವಿಗಳಲ್ಲಿ ಅತ್ಯುಚ್ಚ ಶ್ರೇಣಿಯಲ್ಲಿ ಪಾಸಾದ. ಬಂಗಾರದ ಪದಕ ಪುರಸ್ಕೃತನಾದ. ಸ್ವಪ್ರಯತ್ನದಿಂದ ಬೆಳೆದ ಕೃ.ಶಿ. ಹೆಗಡೆ ರಾಜ್ಯ ಸರಕಾರಿ ಸೇವೆ ಸೇರಿ ಮಹಾರಾಷ್ಟ್ರ ರಾಜ್ಯ ಪಠ್ಯಪುಸ್ತಕ ಹಾಗೂ ಸಂಶೋಧನಾ ಮಂಡಳದ ವಿಶೇಷಾಧಿಕಾರಿ ಹಾಗೂ ವಿದ್ಯಾಸಚಿವರಾಗಿ ರಾಜ್ಯಮಟ್ಟದ ಹುದ್ದೆಯಿಂದ ನಿವೃತ್ತರಾದರು. ಪುಣೆಯಲ್ಲಿ ನಿವೃತ್ತಿ ಜೀವನ ಸಾಗಿಸುತ್ತಿರುವ ಇವರನ್ನು ಕೃ.ಶಿ. ಹೆಗಡೆ ಎಂದು ಕರೆಯುವ ಕಾರಣವನ್ನು ಹಿಂದೆ ಸಂಕ್ಷಿಪ್ತವಾಗಿ ಹೇಳಿದೆ. ಈಗ ವಿಸ್ತರಿಸಲು ಪ್ರಯತ್ನಿಸಲಾಗಿದೆ.

ಮರಾಠಿ ನೆಲದಲ್ಲಿ ಮುಂಬಯಿ, ಪುಣೆಯಲ್ಲಿ ಹಿಂದಿನಿಂದಲೂ ಉತ್ತರ ಕನ್ನಡದ ಅನೇಕರು ವಿವಿಧ ಕಾರಣಗಳಿಗಾಗಿ ನೆಲೆಸುತ್ತಿದ್ದಾರೆ. ವಿವಿಧ ಕ್ಷೇತ್ರಗಳಲ್ಲಿ ತಮ್ಮ ಹೆಜ್ಜೆ ಗುರುತು ಮೂಡಿಸುತ್ತಿದ್ದಾರೆ. ಅವರಲ್ಲಿ ಕೀರ್ತಿಶೇಷರಾದ ಶಾಮರಾವ್ ವಿಠಲ ಕಾಯ್ಕಿಣಿ (1841-1905) ಮುಂಬಯಿ ಹೈಕೋರ್ಟಿನಲ್ಲಿ ಖ್ಯಾತ ನ್ಯಾಯವಾದಿಯೂ, ಮುಂಬಯಿ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರೂ, 'ಕನ್ನಡ ಸುವಾರ್ತೆ' ಸಾರಸ್ವತ ಪತ್ರಿಕೆ ಸ್ಥಾಪಕ ಸಂಪಾದಕರೂ ಆಗಿದ್ದರು. ನಾರಾಯಣ ರಾವ್ ಚಂದಾವರ್ಕರ್ (1855-1923) ಇವರು ಮುಂಬಯಿ ಹೈಕೋರ್ಟಿನಲ್ಲಿ ಮೊಟ್ಟಮೊದಲ ಭಾರತೀಯ ಮುಖ್ಯ ನ್ಯಾಯಾಧೀಶರಾಗಿದ್ದರು. ಕವಿ ಗಂಗಾಧರ ಚಿತ್ತಾಲ (1923-87) ಖ್ಯಾತ ಸಾಹಿತಿ, ಪಂಪ ಪ್ರಶಸ್ತಿ ಪುರಸ್ಕೃತ ಯಶವಂತ ಚಿತ್ತಾಲ (1928-2014), ಸರ್ವಂಟ್ಸ್ ಆಫ್ ಇಂಡಿಯಾ ಸೊಸೈಟಿಯ ಮುಂಬಯಿ ಶಾಖೆ ಮುಖ್ಯಸ್ಥರೂ ಮುಂಬೈ ಪೋರ್ಟ್ ಟ್ರಸ್ಟಿನ ಧರ್ಮದರ್ಶಿಯೂ ಆದ ಖ್ಯಾತ ಚುಟುಕು ಕವಿ ದಿನಕರ ದೇಸಾಯಿ (1909-82), ಕವಿ ಅರವಿಂದ ನಾಡಕರ್ಣಿ (1931-2008), ವಿಡಂಬನ ಕವಿ ವಿ.ಜಿ. ಭಟ್ಟ (1923-91), ಮರಾಠಿ ಸಾಹಿತಿಗಳಾದ ಮಂಗೇಶ್‌ರಾವ್ ತೇಲಂಗ (1859-1949), ಶಿವರಾವ್ ತೇಲಂಗ (1922-2001), ವಾಮನ ದುಭಾಷಿ (1877-1951), ಆನಂದ ನಾಡಕರ್ಣಿ (1903-72), ಶಿವರಾವ್ ನಾಡಕರ್ಣಿ (1892-1984), ಅನಂತ ವರ್ಟಿ (1911-87), ವಿಠಲ ವಾಗಳೆ (1919-2000) ಮತ್ತು ಖ್ಯಾತ ನಾಟಕಕಾರ ದತ್ತಾ ಬಾಂದೇಕರ್ (1909-50) ಹಾಗೂ ಪ್ರೇಮಾ ಕಂಟಕ (1905-85) ಮುಂತಾದವರು ಗಮನಾರ್ಹರು. ವರ್ತಮಾನರಲ್ಲಿ ಮರಾಠಿ ಸಾಹಿತಿ ವಸಂತ ಫೇಣೆ ಮುಂಬೈ (ಜ.1926 ಚೆಂಡಿಯೆ, ಕಾರವಾರ), ಅಂಗ್ರೇಜೀ - ಮರಾಠಿ - ಕೊಂಕಣಿ ಸಾಹಿತಿ ವಿಠಲರಾಯ ಭಟ್ಟ, ಮುಂಬೈ (ಜ. 1935 ಕಡವಾಡ, ಕಾರವಾರ) ಮತ್ತು ಕನ್ನಡ ಹಿತೇಚ್ಛು ಕೃ.ಶಿ. ಹೆಗಡೆ ಪುಣೆ (ಜ. 1945 ಸಾಲಕೋಡು, ಹೊನ್ನಾವರ) ಮುಂತಾದವರು ಮುಂಚೂಣಿಯಲ್ಲಿದ್ದಾರೆ.

ಮರಾಠಿ ನೆಲದಲ್ಲಿ ನಿಂತರೂ ಉತ್ಕಟ ಕನ್ನಡಾಭಿಮಾನಿಯಾಗಿಯೇ ಕರ್ತವ್ಯ ನಿರ್ವಹಿಸುತ್ತಿದ್ದ ಕಾಲಾವಧಿಯಲ್ಲಿ ಕನ್ನಡ ಪಠ್ಯಪುಸ್ತಕಗಳ ರಚನೆ ಸಂಪಾದನೆ- ಪ್ರಕಟಣೆಗಳಲ್ಲಿ ಕೃ.ಶಿ. ಹೆಗಡೆಯವರು ತೋರಿಸಿದ ಶ್ರಮ-ಶ್ರದ್ಧೆ ಅನುಕರಣೀಯ, ಪಠ್ಯಪುಸ್ತಕ ಹಾಗೂ ಸಂಶೋಧನಾ ಮಂಡಳಿಯ ನೇತೃತ್ವ ವಹಿಸಿದ್ದ 1978-2003ರ ಅವಧಿಯಲ್ಲಿ 1ರಿಂದ 8ನೇ ತರಗತಿಯವರಿಗಾಗಿ ಭಾಷೆ, ಗಣಿತ, ವಿಜ್ಞಾನ, ಇತಿಹಾಸ, ಭೂಗೋಳ, ಪೌರನೀತಿ, ಪರಿಸರ ಅಭ್ಯಾಸ, ಆರೋಗ್ಯ, ಕಲೆ ಇತ್ಯಾದಿ ವಿಷಯಗಳಲ್ಲಿ ಪ್ರಕಟಗೊಂಡ ಸುಮಾರು 650 ಕನ್ನಡ ಪುಸ್ತಕಗಳು ಎಲ್ಲ ಕಾಲಕ್ಕೂ ಮಾದರಿಯಾಗಿ ನಿಲ್ಲಬಲ್ಲಂತಹ ಕೃತಿಗಳು. ಇದೊಂದು ಅನನ್ಯ, ಅಪೂರ್ವ ಸಾಧನೆ.

ಋಷಿ ಸದೃಶರಾದ ಸಾನೆ ಗುರೂಜಿಯವರು ಭಾರತದ ಎಲ್ಲ ಭಾಷೆಗಳ ಸಾಮರಸ್ಯಕ್ಕಾಗಿ 'ಅಂತರಭಾರತಿ' ಎಂಬ ಸುಂದರವಾದ ವೇದಿಕೆ/ ಸಂಸ್ಥೆಯ ಕನಸು ಕಂಡಿದ್ದರಂತೆ. ನನಸಾಗಿದ್ದರೆ ನಿಜಕ್ಕೂ ಅದೊಂದು ಭಾರತದ ಸರ್ವಭಾಷಾ ಭಾರತಿಯಾಗುತ್ತಿತ್ತು. ದುರ್ದೈವದಿಂದ ಕನಸು ನನಸಾಗುವ ಮುನ್ನವೇ ಸಾಧಕರು ಕಣ್ಮರೆಯಾದುದು ತುಂಬಬಾರದ ನಷ್ಟ. ವ್ಯಾಪಕ ವಿಸ್ತೃತ-ಸಮಗ್ರ ಭಾರತವೇ ಕಾರ್ಯಕ್ಷೇತ್ರವಾಗಬಹುದಾದ ವೇದಿಕೆಯ ಪುಟ್ಟ ಆವೃತ್ತಿಯ ಕನಸು ಕಂಡವರು ಕೃ.ಶಿ ಹೆಗಡೆ. ಪುಟ್ಟದಾದರೂ ದಿಟ್ಟ ಹೆಜ್ಜೆ ಇಟ್ಟ ಹೆಗಡೆಯವರಿಂದಾಗಿ ಪುಣೆಯಲ್ಲಿ ಮರಾಠಿ - ಕನ್ನಡ ಸ್ನೇಹವರ್ಧನ ಕೇಂದ್ರವು 1989ರಲ್ಲಿ ಸ್ಥಾಪನೆಗೊಂಡಿತು. ಕೃ.ಶಿ. ಹೆಗಡೆ ಸಂಸ್ಥಾಪಕ ವಿಶ್ವಸ್ಥರಲ್ಲೊಬ್ಬರೂ ಕಾರ್ಯದರ್ಶಿಗಳೂ ಆಗಿ ಅದನ್ನು ಕಟ್ಟಿ ಬೆಳೆಸುವಲ್ಲಿ ಕಳೆದ 27 ವರ್ಷಗಳಿಂದ ಅದಕ್ಕೆ ಬೆನ್ನೆಲುಬಾಗಿ ನಿಂತಿದ್ದಾರೆ. ಇಂತಹ ಸಂಸ್ಥೆ ಭಾರತದ ಇನ್ನಾವ ರಾಜ್ಯದಲ್ಲಿಯೂ ಇಲ್ಲವೆಂದು ಹೇಳಲಾಗುತ್ತಿದೆ. ಇನ್ನಾದರೂ ಇಂತಹ ಸಂಸ್ಥೆಗಳು ಎಲ್ಲ ರಾಜ್ಯಗಳಲ್ಲಿಯೂ ಪ್ರಾರಂಭಗೊಳ್ಳಲಿ. ತಮ್ಮ ಸುತ್ತಣ ಎಲ್ಲ ರಾಜ್ಯಗಳ ಭಾಷೆಗಳೊಂದಿಗೆ ನಿರಂತರ ಭಾಷಾ ಸಾಮರಸ್ಯ ಸಾಧಿಸಲಿ. ತನ್ಮೂಲಕ ಅಂತರಭಾರತೀಯ ಕನಸು ನನಸಾಗುವಂತಾಗಲಿ ಎಂದು ಹಾರೈಸೋಣ.

ಸ್ವತಃ ಸಾಹಿತಿಗಳಾದ ಕೃ.ಶಿ. ಹೆಗಡೆಯವರ 16 ಕೃತಿಗಳು ಪ್ರಕಟಗೊಂಡಿವೆ. ಮಹಾರಾಷ್ಟ್ರ ಮತ್ತು ಕರ್ನಾಟಕ ರಾಜ್ಯಗಳ ಅನೇಕ ಸಂಘ-ಸಂಸ್ಥೆಗಳಿಂದ ಪುರಸ್ಕೃತರಾದ ಹೆಗಡೆಯವರ ಲೇಖನಿಯಿಂದ ಹೊರಬಂದ 'ಸೂರಿ ವೆಂಕಟರಮಣ ಶಾಸ್ತ್ರಿ' ಕೃತಿ ವರ್ತಮಾನ ಸಾಧಕನೊಬ್ಬ ಪ್ರಾತಃಸ್ಮರಣೀಯ ಕೀರ್ತಿಶೇಷ ಹವ್ಯಕ ಸಾಧಕರಿಗೆ ಸಲ್ಲಿಸಿದ ಗೌರವವಾಗಿದೆ. ಮೆದುಮಾತಿನ ಸಹೃದಯಿ, ಸದಾ ಹಸನ್ಮುಖಿ ಕೃ.ಶಿ. ಹೆಗಡೆಯವರಿಗೂ ಅವರ ಅನನ್ಯ ಕೃಷಿಗೂ ಶುಭ ಹಾರೈಸುತ್ತೇನೆ. ಇಂಥ ಅಪರೂಪದ ಅವಕಾಶ ದೊರೆತುದು ನನ್ನ ಸುದೈವ. ಇದಕ್ಕೆ ಕಾರಣರಾದವರೆಲ್ಲರಿಗೂ ಕೃತಜ್ಞತೆಗಳು.

# ಸಂಸ್ಕೃತ ಸಾಹಿತ್ಯದ ಹಿರಿಮೆ

✍ ಶೈಲಜಾ ಹೆಗಡೆ, ಮುಂಬಯಿ

## ವಿಶಾಖದತ್ತನ ಮುದ್ರಾರಾಕ್ಷಸ

ಶ್ರವ್ಯ ಮತ್ತು ದೃಶ್ಯಗಳೆಂದು ಕಾವ್ಯದ ಎರಡು ಮುಖ್ಯ ಪ್ರಭೇದಗಳು. ನಾಟಕವು ದೃಶ್ಯ ಕಾವ್ಯ ಪ್ರಭೇದಕ್ಕೆ ಸೇರುವಂತಹುದು. ಪ್ರಕರಣ, ಬಾಣ, ವ್ಯಾಯೋಗ, ಸಮವಕಾರ, ಡಿಮ, ಈಹಾ, ಮೃಗಾಂಕ, ವೀಥಿ, ಪ್ರಹಸನ ಮೊದಲಾದ ಹತ್ತು ರೂಪಕಗಳಲ್ಲಿ ನಾಟಕವೂ ಒಂದು. ದೇವತೆಗಳ ಪ್ರಾರ್ಥನೆಯ ಮೇರೆಗೆ ರಸಾವೇಶಯುಕ್ತ ನಾಟಕವು ತ್ರೇತಾಯುಗದಲ್ಲಿ ಸೃಷ್ಟಿಯಾಯಿತೆಂದು ಭಾರತೀಯ ಪರಂಪರೆ ಸಾರುತ್ತದೆ. ಋಗ್ವೇದದಿಂದ ಕಥಾವಸ್ತುವನ್ನೂ, ಸಾಮವೇದದಿಂದ ಸಂಗೀತವನ್ನೂ, ಯಜುರ್ವೇದದಿಂದ ಅಭಿನಯವನ್ನೂ, ಅಥರ್ವವೇದದಿಂದ ರಸವನ್ನೂ ತೆಗೆದುಕೊಂಡು ಬ್ರಹ್ಮದೇವನು ಈ ನಾಟ್ಯವೇದವನ್ನು ರಚಿಸಿದನೆಂದೂ, ಪಂಚಮ ವೇದವೆಂದು ಕರೆಯಲ್ಪಡುವ ನಾಟ್ಯಕ್ಕೆ ಪರಶಿವನು ತಾಂಡವವನ್ನೂ, ದೇವಿ ಪಾರ್ವತಿಯು ಲಾಸ್ಯವನ್ನೂ ಕರುಣಿಸಿದರೆಂಬುದು ಪ್ರತೀತಿ. ನಾಟಕವು ಸಂವಾದಾತ್ಮಕವಾದುದು. ಋಗ್ವೇದದ ಯುಮ-ಯುಮೀ, ಪುರೂರವ-ಊರ್ವಶೀ, ಸರಮಾ-ಫಣೀ, ಇಂದ್ರ-ಇಂದ್ರಾಣೀ, ಇಂದ್ರ-ಮರುತ್, ಅಗಸ್ತ್ಯ-ಲೋಪಮುದ್ರಾ ಮೊದಲಾದ ಸಂವಾದ ಸೂಕ್ತಗಳು ನಾಟಕ ಕಲೆಗೆ ಪ್ರೇರಣೆಯನ್ನು ಒದಗಿಸಿವೆ.

ಸಂಸ್ಕೃತ ನಾಟ್ಯ ಶಾಸ್ತ್ರದ ಪ್ರಕಾರ, ಕಥಾವಸ್ತುವನ್ನು, ಪ್ರಖ್ಯಾತ (ಐತಿಹಾಸಿಕ), ಉತ್ಪಾದ್ಯ (ಕಾಲ್ಪನಿಕ), ಮಿಶ್ರ ಎಂದು ಮೂರು ವಿಭಾಗಗಳಲ್ಲಿ ವಿಂಗಡಿಸಲಾಗಿದೆ. ನಂದವಂಶವನ್ನು ನಾಶಗೊಳಿಸಿ, ಆಚಾರ್ಯ ಚಾಣಕ್ಯನು ಚಂದ್ರಗುಪ್ತ ಮೌರ್ಯನನ್ನು ಮಗಧ ರಾಜಸಿಂಹಾಸನದ ಮೇಲೆ ಕುಳ್ಳಿರಿಸಿದ ಕಾಲವನ್ನು ಐತಿಹಾಸಿಕವಾಗಿ ಕ್ರಿ.ಪೂ. 625 ಎಂದು ಪರಿಗಣಿಸಲಾಗಿದೆ. ಹಾಗಾಗಿ ಪ್ರಸ್ತುತ ವಿಶಾಖದತ್ತ ವಿರಚಿತ 'ಮುದ್ರಾರಾಕ್ಷಸ' ನಾಟಕದ ಕಥಾವಸ್ತುವು ಐತಿಹಾಸಿಕ ವಿಭಜನೆಯಡಿಯಲ್ಲಿ ಗುರುತಿಸಲ್ಪಡುತ್ತದೆ. ಅಲ್ಲದೆ, 'ಮುದ್ರಾರಾಕ್ಷಸ' ನಾಟಕಕ್ಕೆ ಸಂಬಂಧಪಟ್ಟ ಕಥಾವರ್ಣನೆಗಳು ಶ್ರೀ ಮದ್ಭಾಗವತ ಮತ್ತು ವಿಷ್ಣು ಪುರಾಣಗಳಲ್ಲಿ ದೊರೆಯುತ್ತವೆ. ವಿಶಾಖದತ್ತನು ಮೂಲಕಥಾವಸ್ತುವನ್ನು ಇವುಗಳಿಂದಲೇ ಆಯ್ದುಕೊಂಡಿರಬಹುದೆಂದು ಶಂಕಿಸಲಾಗಿದೆ.

ಅನ್ಯ ಸಂಸ್ಕೃತ ಕವಿಗಳಂತೆಯೇ, ನಾಟಕಕಾರ ವಿಶಾಖದತ್ತನೂ, ತನ್ನ ಆತ್ಮವೃತ್ತವನ್ನು ಎಲ್ಲಿಯೂ ಉಲ್ಲೇಖಿಸಲಿಲ್ಲ. ಆದರೂ ಈತನ ಏಕಮಾತ್ರ ಉಪಲಬ್ಧ ಕೃತಿ ಮುದ್ರಾರಾಕ್ಷಸ ನಾಟಕದಲ್ಲಿ ದೊರೆಯುವ 'ಆಜ್ಞಾಪಿತೋಸ್ಮಿ ಪರಿಷದಾ ಯಥಾ-ಆದ್ಯ ಸಾಮಂತ ವಟೇಶ್ವರದತ್ತ ಪೌತ್ರಸ್ಯ ಮಹಾರಾಜಪದಭಾಕ್ ಪೃಥು ಸೂನೋಃ ಕವೇರ್ವಿಶಾಖದತ್ತಸ್ಯ ಕೃತಿಂ ಮುದ್ರಾರಾಕ್ಷಸಂ ನಾಮ ನಾಟಕಂ ನಾಟಯಿತವ್ಯಮ್' ಎಂಬ ವಾಕ್ಯದ ಆಧಾರದಿಂದ ಕವಿ ವಿಶಾಖದತ್ತನು ಸಾಮಂತ ವಟೇಶ್ವರದತ್ತನ ಮೊಮ್ಮಗನೆಂದೂ, ಮಹಾರಾಜ ಪೃಥುವಿನ ಪುತ್ರನೆಂದೂ ಊಹಿಸಬಹುದಾಗಿದೆ. ಆದರೆ, ಇದಕ್ಕೆ ಸಂಬಂಧಿಸಿ ಯಾವುದೇ ಇನ್ನಿತರ ಐತಿಹಾಸಿಕ ಸಾಕ್ಷಿಗಳು ದೊರೆಯುವುದಿಲ್ಲ. ದತ್ತಪದದ ಪ್ರಯೋಗದಿಂದ ಹಲವು ವಿದ್ವಾಂಸರು ಈತನನ್ನು ದತ್ತವಂಶದವನಿರಬಹುದೆಂದು ತರ್ಕಿಸುತ್ತಾರೆ. ನಾಟಕದ ರಚನೆಯ ಕಾಲವನ್ನು ಪರಿಶೀಲಿಸಿದಾಗ ಅಂದು ಭಾರತದಲ್ಲಿ ರಾಜತಂತ್ರ ಆಡಳಿತ ವ್ಯವಸ್ಥೆಯಿತ್ತು. ಚಿಕ್ಕ ಚಿಕ್ಕ ರಾಜರು ಮತ್ತು ಸಾಮಂತರು ಅಧಿಕಾರದಲ್ಲಿದ್ದು, ರಾಜ್ಯ ವಿಸ್ತಾರಕ್ಕಾಗಿ ಒಬ್ಬರ ಮೇಲೊಬ್ಬರು ಆಕ್ರಮಣಗೈಯಲು ಹೊಂಚು ಹಾಕುತ್ತಿದ್ದರು. ಕವಿಯು ಪರಿಶುದ್ಧ ಕೂಟನೀತಿಯುಳ್ಳ ಮೌರ್ಯವಂಶದ ರಾಜಕೀಯ, ಧಾರ್ಮಿಕ ಮತ್ತು ನೈತಿಕ ದಶೆಯನ್ನು ಚಿತ್ರಿಸಿ, ಸಮಾಜದಲ್ಲಿ ಯಥಾರ್ಥವಾದ ಆದರ್ಶವನ್ನು ಸ್ಥಾಪಿಸಲು ಈ ನಾಟಕವನ್ನು ರಚಿಸಿರಬಹುದೆಂಬುದು ದಾರ್ಶನಿಕರ ಮತ. ಅಲ್ಲದೆ 'ಮುದ್ರಯಾ ಗೃಹೀತಂ ರಾಕ್ಷಸಮಧಿಕೃತ್ಯ ಕೃತಃ ಗ್ರಂಥಃ ಮುದ್ರಾರಾಕ್ಷಸಂ'ಮುದ್ರೆಯನ್ನು ಸಾಧನವಾಗಿಟ್ಟುಕೊಂಡು ಅಮಾತ್ಯ ರಾಕ್ಷಸನನ್ನು ನಿಗ್ರಹಿಸಿದ ಘಟನೆಯನ್ನು ಪ್ರಮುಖವಾಗಿಟ್ಟುಕೊಂಡು ರಚಿಸಿದ ನಾಟಕವಾದ್ದರಿಂದ ಇದಕ್ಕೆ ಇಟ್ಟ 'ಮುದ್ರಾರಾಕ್ಷಸ' ವೆಂಬ ನಾಮಾಂಕಿತವು ಔಚಿತ್ಯಪೂರ್ಣವಾಗಿದೆ.

ನಂದರಾಜನಿಂದ ಅವಮಾನಿತನಾದ ಕುಟಿಲನೀತಿಜ್ಞ ಚಾಣಕ್ಯನು ತನ್ನ ಪ್ರತಿಶೋಧ ತಂತ್ರದಿಂದ ನಂದವಂಶವನ್ನು ನಾಶಮಾಡಿ, ಮೌರ್ಯಚಂದ್ರಗುಪ್ತನನ್ನು ಮಗಧ ಸಿಂಹಾಸನದ ಮೇಲೆ ಕೂಡ್ರಿಸಿ, ಪ್ರತಿಭಾಶಾಲಿಯಾದ ನಂದಾಮಾತ್ಯ ರಾಕ್ಷಸನನ್ನು ಸಮ್ರಾಟ್ ಚಂದ್ರಗುಪ್ತನ ಅಮಾತ್ಯನನ್ನಾಗಿಸುವ ಉತ್ಕಟ ಇಚ್ಛೆಯನ್ನು ಹೊಂದುತ್ತಾನೆ. ಮೌರ್ಯ ಚಂದ್ರಗುಪ್ತನು ಕುಸುಮಪುರಿಯಲ್ಲಿ ಕೌಮುದಿ ಮಹೋತ್ಸವವನ್ನು ಏರ್ಪಡಿಸುತ್ತಾನೆ. ಆತನನ್ನು ಸಂಹರಿಸಲು ಅಮಾತ್ಯ ರಾಕ್ಷಸನು ಪಿತೂರಿಯನ್ನು ನಡೆಸುತ್ತಾನೆ. ಇದನ್ನು ಗುಪ್ತಚರರ ಮೂಲಕ ತಿಳಿದ ಮಹಾನ್ ರಾಜನೀತಿಜ್ಞ ಚಾಣಕ್ಯನು ಕೌಮುದಿ ಮಹೋತ್ಸವವನ್ನು ನಿಷೇಧಿಸುತ್ತಾನೆ. ಇದು ಚಾಣಕ್ಯ ಮತ್ತು ಚಂದ್ರಗುಪ್ತರ ನಡುವಿನ ಮಧುರ ಬಾಂಧವ್ಯದಲ್ಲಿ ಬಿರುಕನ್ನುಂಟುಮಾಡುವ ಹೇತುವೆನಿಸುತ್ತದೆ. ಈ ಸಂದರ್ಭವನ್ನೇ ಕಾಯುತ್ತಿದ್ದ ರಾಕ್ಷಸನು ಪರ್ವತೇಶ್ವರ ಪುತ್ರ ಮಲಯಕೇತುವನ್ನು ನಂದಸಿಂಹಾಸನದ ಮೇಲೆ ಕೂಡ್ರಿಸಲು ನಿಶ್ಚಯಿಸುತ್ತಾನೆ. ಇದಕ್ಕೆ ಪ್ರತಿಯಾಗಿ ತನ್ನ ಆಭೂಷಣಗಳನ್ನು ರಾಕ್ಷಸನಿಗೆ ಪಾರಿತೋಷಕ ರೂಪದಲ್ಲಿ ಅರ್ಪಿಸಲು ಮಲಯಕೇತುವು ನಿರ್ಧರಿಸುತ್ತಾನೆ. ಕೂಟನೀತಿಜ್ಞ ಚಾಣಕ್ಯನು ರಾಕ್ಷಶನ ವಿಶ್ವಾಸಪಾತ್ರ ಮಿತ್ರ ಚಂದನದಾಸನ ಮನವೊಲಿಸಿ, ಮುದ್ರೆಯ ಸಹಾಯದಿಂದ ಕೂಟಲೇಖವನ್ನು ಬರೆಸುತ್ತಾನೆ. ಇದರಿಂದ ಮಲಯಕೇತುವಿಗೆ ರಾಕ್ಷಸನಲ್ಲಿ ಅವಿಶ್ವಾಸ ಮೂಡುತ್ತದೆ. ಕ್ರೋಧಾವೇಶಯುಕ್ತನಾದ ಅವನು ತನ್ನ ಸಹಯೋಗಿ ರಾಜರನ್ನು ಕೊಲ್ಲುತ್ತಾನೆ. ಅದರಿಂದ ಆತನಿಗೆ ಸೆರೆವಾಸವಾಗುತ್ತದೆ. ರಾಜದ್ರೋಹಿಯೆಂದು ಚಂದನದಾಸನಿಗೆ ಪ್ರಾಣದಂಡ ಶಿಕ್ಷೆಯನ್ನು ಸೂಚಿಸಲಾಗುತ್ತದೆ. ಮಿತ್ರ ಚಂದನದಾಸನ ಸ್ಥಿತಿಯಿಂದ ಬೇಸತ್ತ ಅಮಾತ್ಯ ರಾಕ್ಷಸನು ಆತ್ಮಸಮರ್ಪಣಕ್ಕೆ ಸಿದ್ಧನಾಗುತ್ತಾನೆ. ನಿರುಪಾಯನಾಗಿ ಚಂದ್ರಗುಪ್ತನ ಅಮಾತ್ಯ ಪದವಿಯನ್ನು ಸ್ವೀಕರಿಸುತ್ತಾನೆ. ಚತುರೋಪಾಯದಲ್ಲಿ ಸಫಲನಾದ ಚಾಣಕ್ಯನು ಬಂಧನದಲ್ಲಿರುವ ಎಲ್ಲರನ್ನೂ ಮುಕ್ತಗೊಳಿಸಿ, ತನ್ನ ಉನ್ಮುಕ್ತ ಶಿಖೆಯನ್ನು ಬಂಧಿಸಿ, ಪ್ರತಿಜ್ಞಾಪೂರ್ಣನಾಗುತ್ತಾನೆ. ಇದು ನಾಟಕದ ಮುಖ್ಯ ಕಥಾವಸ್ತುವಾಗಿದೆ.

'ನಾಂದ್ಯಂತೇ ತತಃ ಪ್ರವಿಶತಿ ಸೂತ್ರಧಾರಃ' ಎಂಬ ಸಂಸ್ಕೃತ ನಾಟಕದ ನಿಯಮಾನುಸಾರ, ಸೂತ್ರಧಾರನು ಪ್ರವೇಶಿಸಿ ಸಭಿಕರೊಡನೆ ಸಂದರ್ಭೋಚಿತವಾದ ಮಾತುಕತೆಗಳನ್ನಾಡುತ್ತಾನೆ. ನಾಟಕದ ಆರಂಭವೂ ಆಚಾರ್ಯ ಚಾಣಕ್ಯನ ಕುಟಿಲನೀತಿಯಿಂದ ಆರಂಭವಾಗುತ್ತದೆ. ನಾಟಕದ ನಾಂದಿಪದ್ಯ ಮತ್ತು ಭರತವಾಕ್ಯಗಳು ವೈಶಿಷ್ಟ್ಯ ಪೂರ್ಣವಾಗಿವೆ.

ಉದಾಹರಣೆಗೆ, ನಾಂದಿಪದ್ಯ-೧

'ಧನ್ಯಾ ಕೇಯಂ ಸ್ಥಿತಾ ತೇ ಶಿರಸಿ? ಶಶಿಕಲಾ ಕಿಂನು ನಾಮೇತದಸ್ಯಾ।
ನಾಮ್ಯೈವಾಸ್ಯಾಸ್ತದೇತತ್ ಪರಿಚಿತಮಪಿ ತೇ ವಿಸ್ಮೃತಂ ಕಸ್ಯ ಹೇತೋಃ॥
ನಾರೀಂ ಪೃಚ್ಛಾಮಿ ನೇಂದುಂ, ಕಥಯತು ವಿಜಯಾ ನ ಪ್ರಮಾಣಂ
ಯದೀಂದು-ರ್ದೇವ್ಯಾ ನಿಹ್ನೋತುಮಿಚ್ಛೋರಿತಿ ಸುರಸರಿತಂ ಶಾಠ್ಯಮವ್ಯಾದ್ವಿಭೋರ್ವಃ॥

(ಪರಶಿವನ ಶಿರದಲ್ಲಿ ಪವಡಿಸಿದ ಗಂಗೆಯ ಕುರಿತು, ಪ್ರಶ್ನಿಸುವ ಕೋಪೋದ್ರಿಕ್ತಳಾದ ಪಾರ್ವತಿಯೊಡನೆ, ಶಿವನ ಸಲ್ಲಾಪವು ಕುತೂಹಲಕಾರಿಯಾಗಿದೆ)

ಪಾರ್ವತಿಃ ಹೇ ವಿಭೋ; ನಿನ್ನ ಶಿರದಲ್ಲಿ ಶೋಭಿಸುವ ಈ ಧನ್ಯೆ ಯಾರು?

ಶಿವ : ಅವಳು ಶಶಿಕಲಾ

ಪಾರ್ವತಿ : ಏನು ಶಶಿಕಲಾ? ಇವಳ ಹೆಸರು?

ಶಿವ : ಹಾ, ಇವಳ ಹೆಸರು ಶಶಿಕಲಾ. ಇವಳು ನಿನಗೆ ಪರಿಚಿತಳು. ಯಾವ ಕಾರಣಕ್ಕಾಗಿ ನೀನು ಇವಳನ್ನು ಮರೆತಿರುವೆ?

ಪಾರ್ವತಿ : ನಾನು ನಿನ್ನ ಶಿರದಲ್ಲಿ ಶೋಭಿಸುವ ಚಂದ್ರಮನನ್ನು ಕುರಿತು ಕೇಳುತ್ತಿಲ್ಲ. ಶಿರಸ್ಸಿನಲ್ಲಿ ನೆಲೆಸಿರುವ ನಾರಿಯನ್ನು ಕುರಿತು ಕೇಳುತ್ತಿದ್ದೇನೆ. ಇವಳು ಯಾರು?

ಶಿವ : ಇವಳು ಶಶಿಕಲಾ ಎಂಬ ನನ್ನ ಮಾತಿನಲ್ಲಿ ನನಗೆ ವಿಶ್ವಾಸವಿಲ್ಲದಿದ್ದರೆ, ನಿನ್ನ ಸಖಿ ವಿಜಯಾಳನ್ನು ಕೇಳು. ಹೀಗೆ ಪಾರ್ವತಿಯ ಕೋಪದಿಂದ ಸುರಗಂಗೆಯನ್ನು ರಕ್ಷಿಸುವ ಪರಶಿವನ ದಾರ್ಷ್ಟ್ಯವು ಸಮಾಜವನ್ನು ರಕ್ಷಿಸಲಿ.

ಇದಲ್ಲದೆ, ಚಾಣಕ್ಯನೀತಿಯೆಂದೇ ಪ್ರಸಿದ್ಧವಾದ ಅರ್ಥನೀತಿ ಮತ್ತು ರಾಜನೀತಿಗಳು ಆದ್ಯಂತವಾಗಿ ನಾಟಕದಲ್ಲಿ ಸಮುಚಿತವಾಗಿ ಹೆಣೆದುಕೊಂಡಿವೆ. ಅವು ಕೇವಲ ಅಂದಿನ ರಾಜತಂತ್ರಕ್ಕೊಂದೇ ಸೀಮಿತವಾಗಿರದೆ, ಇಂದಿನ ಪ್ರಜಾತಂತ್ರಕ್ಕೂ ಪ್ರಯೋಜನಕಾರಿಯಾಗಿ ಪರಿಣಮಿಸಬಲ್ಲವು. ನಾಟಕದಲ್ಲಿ ಕಂಡುಬರುವ,

'ಅಧಿಕಾರಪದಂ ನಾಮ ನಿರ್ದೋಷಸ್ಯಾಪಿ ಪುರುಷಸ್ಯ ಮಹಾದಾಶಂಕಾಸ್ಥಾನಮ್' (ರಾಕ್ಷಸ)

● ಅಧಿಕಾರವೆನ್ನುವುದು ನಿರ್ದೋಷಿ ಪುರುಷನನ್ನೂ ಆತ್ಯಂತಿಕವಾಗಿ ಭಯಭೀತಗೊಳಿಸುತ್ತದೆ.

'ಪ್ರಾಯಃ ಭೃತ್ಯಾಃ ತ್ಯಜಂತಿ ಪ್ರಚಲಿತ ವಿಭವಂ ಸ್ವಾಮಿನಂ ಸೇವಮಾನಾಃ' (ರಾಕ್ಷಸ)

● ಸೇವೆಗೈಯುತ್ತಿರುವ ಸೇವಕರೂ ಕೂಡ ಭಾಗ್ಯಹೀನನಾದ (ವೈಭವವನ್ನು ಕಳೆದುಕೊಂಡ) ರಾಜನನ್ನು ತ್ಯಜಿಸುತ್ತಾರೆ. (ಇಲ್ಲಿ ಸೂರ್ಯಾಸ್ತವಾದ ಮೇಲೆ ನೆರಳು ಹೊರಟುಹೋಗುವಂತೆ, ಎಂಬರ್ಥದಲ್ಲಿ ಕವಿಯು ಕೊಡುವ ಉಪಮೆ ಸುಂದರವಾಗಿದೆ)

'ಅತ್ಯಾದರಃ ಶಂಕನೀಯಃ'(ಚಂದನದಾಸ)

● ಅತಿ ಆದರವು ಸಂಶಯಕ್ಕೆ ಕಾರಣವಾಗಬಲ್ಲುದು.

'ದೈವಮವಿದ್ವಾಂಸಃ ಪ್ರಮಾಣಯಂತಿ' (ಚಾಣಕ್ಯ)

● ದೈವವನ್ನು ಮೂರ್ಖರು ಅವಲಂಬಿಸುತ್ತಾರೆ.

'ವಿದ್ವಾಂಸೋಪ್ಯವಿಕತ್ಥನಾ ಭವಂತಿ'(ರಾಜ)

● ವಿದ್ವಾಂಸರೂ ಆತ್ಮಪ್ರಶಂಸಕರಾಗಿರುತ್ತಾರೆ.

ಇವೇ ಮೊದಲಾದ ಲೋಕೋಕ್ತಿಗಳು ಸಾರ್ವಕಾಲಿಕವಾದವುಗಳು. ಎಲ್ಲ ಸಂಸ್ಕೃತ ನಾಟಕಗಳಲ್ಲಿರುವಂತೆ, ಪ್ರಸ್ತುತ ಮುದ್ರಾರಾಕ್ಷಸ ನಾಟಕದಲ್ಲಿಯೂ ನೀಚಪಾತ್ರಗಳು ಪ್ರಾಕೃತದಲ್ಲೂ, ಉಚ್ಚಪಾತ್ರಗಳು ಸಂಸ್ಕೃತದಲ್ಲೂ ಸಂಭಾಷಣೆಯನ್ನು ನಡೆಸುತ್ತವೆ. ಕೊನೆಯಲ್ಲಿ ಭರತವಾಕ್ಯವಿದೆ.

ಭರತವಾಕ್ಯ-

'ವಾರಾಹೀ ಮಾತ್ಮಯೋನೇ'
ಸ್ತನುಮತನುಬಲಾಮಾಸ್ಥಿತಸ್ಯಾನುರೂಪಾಂ
ಯಸ್ಯ ಪ್ರಾಗ್ದಂತಕೋಟಿಂ ಪ್ರಲಯಪರಿಗತಾಶಿ ಶ್ರಿಯೇಭೂತಧಾತ್ರಿ।
ಮ್ಲೇಚ್ಛೈರುದ್ವಿಜ್ಯಮಾನಾ ಭುಜಯುಗಮಧುನಾ ಪೀವಂರ
ರಾಜಮೂರ್ತೇಃ
ಸಶ್ರೀಮದ್ಬಂಧುಭೃತ್ಯಶ್ಚಿರಮವತು ಮಹೀಂ ಪಾರ್ಥಿವಶ್ಚಂದ್ರಗುಪ್ತಃ॥

● ಯಾವ ಸ್ವಯಂಭೂ ಭಗವಾನ್ ವಿಷ್ಣುವಿನ ದಂತಾಗ್ರ ಭಾಗವನ್ನು ಆಶ್ರಯಿಸಿದ ಈಗ ಮ್ಲೇಚ್ಛರಿಂದ ಪೀಡಿತವಾಗಿದ್ದ ಭೂಮಿಯು ಸಮ್ರಾಟ್ ಚಂದ್ರಗುಪ್ತನ ಭುಜಯುಗಳವನ್ನು ಆಶ್ರಯಿಸಿದೆ. ಶ್ರೀಸಂಪನ್ನನೂ, ಬಾಂಧವರು ಮತ್ತು ಸೇವಕರಿಂದ ಕೂಡಿದ ಸಮ್ರಾಟ್ ಚಂದ್ರಗುಪ್ತನು ಚಿರಕಾಲ ಈ ಭೂಮಿಯನ್ನು ಆಳಲಿ (ರಕ್ಷಿಸಲಿ).

ಭರತವಾಕ್ಯವು ಆಶೀರ್ವಾದಾತ್ಮಕವಾಗಿರಬೇಕೆಂಬುದು ಪ್ರಾಚೀನ ಪರಂಪರೆ. ನಾಟ್ಯಶಾಸ್ತ್ರ ಪ್ರಣೇತಾ ಭರತಮುನಿಯನ್ನು ಉದ್ದೇಶಿಸಿ ಈ ಪರಂಪರೆ ಬೆಳೆದುಕೊಂಡು ಬಂದಿರಬಹುದೆಂಬುದನ್ನು ಭರತವಾಕ್ಯವೆಂಬ ಅನ್ವರ್ಥಕವು ಸೂಚಿಸುತ್ತದೆ. ಇಲ್ಲಿ ಚಂದ್ರಗುಪ್ತ ಮೌರ್ಯನನ್ನು ಮಹಾವಿಷ್ಣುವಿಗೆ ಹೋಲಿಸಿ ಸದಾಶಯವನ್ನು ವ್ಯಕ್ತಪಡಿಸಿರುವುದು ಕವಿಯ ಪ್ರತಿಭಾ ಕೌಶಲವನ್ನು ದೃಢೀಕರಿಸುತ್ತದೆ. ಹೀಗೆ ವಿಶಾಖದತ್ತ ವಿರಚಿತ 'ಮುದ್ರಾರಾಕ್ಷಸ' ಎಂಬ ನಾಟಕವು ಐತಿಹಾಸಿಕವಾಗಿಯೂ, ರಾಜಕೀಯವಾಗಿಯೂ, ಸಾಮಾಜಿಕವಾಗಿಯೂ, ನೈತಿಕವಾಗಿಯೂ ಮಹತ್ವವನ್ನು ಪಡೆದುಕೊಂಡು ವಿದ್ವಜ್ಜನರ ಮನ್ನಣೆಯನ್ನು ಗಳಿಸಿದೆ. ಚಾಣಕ್ಯನೀತಿಯನ್ನು ಬಿಂಬಿಸುವ ಈ ನಾಟಕವು ಇಂದೂ ಮೇರುಕೃತಿಗಳಲ್ಲಿ ಒಂದಾಗಿದೆ.

## *Letter of Thanks*

Respected authority,



Sub. : Thanking letter

I am B. I. Pavitra completed my B.E. Education in Dr. Ambedkar Institute of Technology, Bengaluru. I have scored 9.5 on points 10 points scale and stood first and also received GOLD MEDAL.

My gratitude to your trust for helping me economically throughout my engineering career for 4 years.

Thanking you,

Yours faithfully,
**B. I. Pavitra**

*PAGE DONATED BY : **SHRI S. M. HEGDE,** SANTACRUZ*

# ಬಾರಕೂರು ( ಉಡುಪಿ ತಾಲೂಕು ) ಪರಿಚಯ - ಯಾಕೆ ?

✍ ಬಿ. ಎಂ. ಭಟ್

ಬಾರಕೂರು ಉಡುಪಿಯಿಂದ 20 ಕಿ. ಮೀ ಉತ್ತರಕ್ಕೆ ಇದ್ದು ಸೀತಾನದಿಯ ದಡದ ಮೇಲಿದೆ. ಕಂಗೊಳಿಸುವ ತೆಂಗಿನ ಮರಗಳ ಸಾಲು, ನದಿಯ ಇಬ್ಬದಿಯಲ್ಲಿಯೂ ಇದ್ದು ನೋಡಲು ಅಪೂರ್ವ ಸುಂದರ ಮಯವಾಗಿದೆ.

ತುಳುಭಾಷೆಯ ಮಾತೃಭೂಮಿಯಾಗಿದ್ದು ಅಳಿಯ ಸಂತಾನ ಕಟ್ಟು (ತಂದೆ, ತಾಯಿ ಮನೆಯ ಆಸ್ತಿ ಪಾಸ್ತಿಯು ಹೆಣ್ಣು ಮಕ್ಕಳಿಗೆ ಸೇರಿ ಲಗ್ನದ ನಂತರ ಅಳಿಯ, ಹೆಂಡತಿಯ ಮನೆಗೆ ಬಂದು ಉಳಿಯುವುದು) ಇಲ್ಲಿಂದಲೇ ಹುಟ್ಟಿತ್ತು. ಭೂತಾಳ ಪಾಂಡ್ಯನು ರಾಜ್ಯವಾಳುವ ಸಮಯ ಕುಂಡೋದರ ಭೂತದ ಆಜ್ಞೆ ಪ್ರಕಾರ ಈ ನಿಯಮವಾಯ್ತು ಎನ್ನುತ್ತಾರೆ.

ಬಾರಕೂರಲ್ಲಿ 365 ದಿನಗಳಿಗೆ ಅಷ್ಟೇ ದೇವಸ್ಥಾನಗಳಿದ್ದು ಈಗ ಕೆಲವೊಂದು ಕಣ್ಮರೆಯಾಗಿದೆ.

ಹಿಂದೂಗಳ ಉಪಜಾತಿಗಳಿಗೆ ಮೂಲಸ್ಥಾನವೆಂದು ಬಿಂಬಿತವಾದ ದೇವಸ್ಥಾನಗಳಿವೆ. ಅವುಗಳೆಂದರೆ ಮುಖ್ಯವಾಗಿ -

1. ಆಚಾರ್ಯರಿಗೆ ಕಾಳಿಕಾಂಬ ದೇವಸ್ಥಾನ.
2. ಮೊಗವೀರರಿಗೆ (ಬೆಸ್ತರು) ಬೆಣ್ಣೆಕುದ್ರು ಕುಲಮಾಸ್ತಿ ಅಮ್ಮನವರ ದೇವಸ್ಥಾನ.
3. ಶೆಟ್ಟಿಗಾರರು (ಮಗ್ಗ ನೇಯುವವರು) ವೀರಭದ್ರ ದೇವಸ್ಥಾನ.
4. ಭಂಡಾರಿಯವರ - ನಾಗೇಶ್ವರ ದೇವಸ್ಥಾನ
5. ಗಾಣಿಗರ ವೇಣುಗೋಪಾಲಕೃಷ್ಣ ದೇವಸ್ಥಾನ
6. ಚಮ್ಮಾರರು (ಮೆಟ್ಟು ಹೊಲಿಯುವವರು) ಸರಸ್ವತಿ ನಾರಾಯಣಿ ದೇವಸ್ಥಾನ
7. ಕೂಸಾಳು - ಬಬ್ಬುಸ್ವಾಮಿ ದೇವಸ್ಥಾನ
8. ದೇವಾಡಿಗರು - ಏಕನಾಥೇಶ್ವರ ದೇವಸ್ಥಾನ (ಈಗ ಮಾಡುತ್ತಿದ್ದಾರೆ)
9. ಬಿಲ್ಲವರು (ಈಡಿಗರು) - ನಾರಾಯಣ ಗುರು ದೇವಸ್ಥಾನ ಇದಲ್ಲದೆ ಇತರ ಅನೇಕ ದೇವಾಲಯಗಳಿವೆ.

1. ಕೋಟೆಕೇರಿ-ಪಂಚಲಿಂಗೇಶ್ವರ ದೇವಸ್ಥಾನ
2. ಮಣಿಗಾರಕೇರಿ - ಸೋಮನಾಥ ದೇವಸ್ಥಾನ
3. ಚೌಳಿಕೇರಿ - ಈಶ್ವರ ಮತ್ತು ಗಣಪತಿ ದೇವಸ್ಥಾನ
4. ಅರಸಿಕೇರಿ - ಅಮ್ಮನವರ ದೇವಸ್ಥಾನ
5. ಮೂಡುಕೇರಿ - ಈಶ್ವರ ದೇವಸ್ಥಾನ
6. ಬಳೆಗಾರಕೇರಿ - ಅಮ್ಮನವರು ಮತ್ತು ಹನುಮಂತ ದೇವಸ್ಥಾನ
7. ಪಟಸಾಲಿಗೇರಿ - ವಿಶ್ವನಾಥ ದೇವಸ್ಥಾನ
8. ರಂಗನಕೇರಿ - ಗಣಪತಿ ದೇವಸ್ಥಾನ
9. ಭಂಡಾರಕೇರಿ - ಕೃಷ್ಣ ದೇವಸ್ಥಾನ (ಭಂಡಾರಕೇರಿ ಮೂಲಮಠ)
10. ಹೊಸಕೇರಿ - ಗಣಪತಿ ದೇವಸ್ಥಾನ

ಇವುಗಳಲ್ಲದೇ ಯಕ್ಷದೇವರಿಂದ ಸ್ಥಾಪಿತವಾದ ಶ್ರೀ ಹನೇಹಳ್ಳಿ ಸಿದ್ದೇಶ್ವರ ಸಿದ್ಧನಾಥ ದೇವಸ್ಥಾನ. ಇದರಲ್ಲಿ ಸಿದ್ಧರಸ ಬಾವಿ ಇದ್ದು ಇದರಲ್ಲಿ ಕಬ್ಬಿಣ ತಾಗಿಸಲು ಚಿನ್ನವಾಗುವುದೆಂಬ ಪ್ರತೀತಿ.

ಅಲ್ಲದೇ ವೈಷ್ಣವ ಸಂಪ್ರದಾಯದ ತುಳುವೇಶ್ವರ ಗೋಪಾಲಕೃಷ್ಣ ದೇವಾಲಯ, ಹೊಸಾಳ ತಿರುಮಲ (ವೆಂಕಟರಮಣ) ದೇವಸ್ಥಾನಗಳಿವೆ.

ಚಕ್ರವರ್ತಿ ವಿಕ್ರಮಾದಿತ್ಯರ ಸಿಂಹಾಸನದಲ್ಲಿ ಬನ್ನಿಮಹಂಕಾಳಿ ಸಿಂಹವಾಹಿನಿ ದೇವಸ್ಥಾನ ಇದ್ದು, ನವರಾತ್ರಿ ಉತ್ಸವವು ವರ್ಷಂಪ್ರತಿ ವಿಜೃಂಭಣೆಯಿಂದ ನಡೆಯುವುದು. ದಿಗಂಬರ ಜೈನರ ಅನೇಕ ಬಸದಿಯೂ ಇದ್ದು ಈಗ ರಾಷ್ಟ್ರೀಯ ಸ್ಮಾರಕವಾಗಿರುತ್ತದೆ. ಕೆಥೋಲಿಕ್ ಕ್ರಿಶ್ಚಿಯನ್‌ರಿಗೆ ಇಗರ್ಜಿಯೂ, ಮುಸ್ಲಿಮರಿಗೆ ಮಸೀದಿಯೂ ಇದೆ.

ಬಾರಕೂರು ಅತಿ ಚಿಕ್ಕ ಗ್ರಾಮ ಪಂಚಾಯತ್ ಊರಾಗಿದ್ದರೂ ಕಾಂಕ್ರೀಟು ರಸ್ತೆಗಳು, ಮುಚ್ಚಿದ ಮಳೆಗಾಲ ಚರಂಡಿಗಳು ಇದ್ದು ಚೊಕ್ಕ, ಸುಂದರವಾಗಿದ್ದು ಜನರು ಶಾಂತಿ, ಶಿಸ್ತು ಪ್ರಿಯರಾಗಿದ್ದಾರೆ. ಸೀತಾನದಿಯು ಅರಬೀ ಸಮುದ್ರವನ್ನು ಸಮೀಪದಲ್ಲಿಯೇ ಸೇರುವುದರಿಂದ ಹಿನ್ನೀರು ದೋಣಿ ವಿಹಾರಕ್ಕೆ ಯೋಗ್ಯವಾಗಿವೆ.

ಇದು ವಾಣಿಜ್ಯ ಗ್ರಾಮವಾಗಿದ್ದು ಪ್ರಮುಖ ಬ್ಯಾಂಕುಗಳಾದ ಕೆನರಾ ಬ್ಯಾಂಕ್, ಸಿಂಡಿಕೇಟ್ ಬ್ಯಾಂಕ್, ಕಾರ್ಪೋರೇಶನ್ ಬ್ಯಾಂಕ್, ಎಸ್‌ಸಿಡಿಸಿಸಿ ಬ್ಯಾಂಕ್, ಮೂರ್ತೆದಾರರ ಬ್ಯಾಂಕ್, ಕೆಥೋಲಿಕ್ ಬ್ಯಾಂಕ್, ಸರ್ವೋದಯ ಬ್ಯಾಂಕ್, ವ್ಯವಸಾಯಿ ಬ್ಯಾಂಕ್ ಶಾಖೆಗಳಲ್ಲದೇ ಅನೇಕ Finance ಕಂಪನಿಗಳೂ ಇವೆ.

ಕೊಂಚ ಭಾವುಕರು, ಇತಿಹಾಸ ಆಸಕ್ತಿಯುಳ್ಳವರು ಪರಂಪರೆಯ ಬಗ್ಗೆ ಕಾಳಜಿ ಇರುವವರು ಬಾರಕೂರಿಗೆ ಒಮ್ಮೆ ಬರಬೇಕು. ಕರಾವಳಿಯ ಗತವೈಭವದ ಕುರುಹುಗಳು ಎದ್ದು ಬಂದು ಸ್ವಾಗತಿಸುವ ಅನುಭವವಾಗುತ್ತದೆ.

ಕಲ್ಲು ಚಪ್ಪರ ಬಾರಕೂರಿನ ಕೇಂದ್ರಬಿಂದುವಾಗಿದ್ದು ಶಿಲಾಸ್ತಂಭ ಕಲಾಕೃತಿಯಿಂದ ಕೂಡಿದೆ. ವಿದ್ಯಾರ್ಜನೆಗೆ ತುಂಬಾ ಶಾಲೆಗಳಿದ್ದು ಫಸ್ಟ್ ಗ್ರೇಡ್ ಕಾಲೇಜುವರೆಗೂ ಉಂಟು.

ಜನರು ಬದುಕಿನ ಎಲ್ಲಾ ಅಗತ್ಯಗಳಾದ ಆರ್ಥಿಕವಾಗಿ, ರಾಜಕೀಯವಾಗಿ, ಸಾಮಾಜಿಕವಾಗಿ, ಧಾರ್ಮಿಕವಾಗಿ, ಸಾಂಸ್ಕೃತಿಕವಾಗಿ ಸುಖಿಗಳಾಗಿರುವರು ಎನ್ನಲು ಸಂತಸವಾಗುತ್ತಿದೆ.

## Donations

### for Women Welfare Cell

| | |
|---|---|
| Shri Shankar Bhat | Rs. 7,000/- |
| Smt. Geeta & Shri Vinayak Markande | Rs. 5,001/ |
| Kum. Divya Markande | Rs. 1,000/- |

*PAGE DONATED BY : **SMT. SHANTA V. HEGDE,** CARMICHAEL ROAD*

# SIDE EFFECTS OF SUGAR

Eating sweets is a part of our celebration whether at festivals or at our parties. While sugary treats are hard to pass up, eating too much sugar may wreak havoc on your body, resulting in a number of illnesses. Many diseases are on the rise, from diabetes to cardio-vascular problems, cancer and even adrenal fatigue due to over-indulging in sweet. So, if throughout the day you often find yourself craving something sweet and comforting, you may just be addicted to sugar. But, how can you determine whether you are eating too much?

Warning signs

These warning signs may just be telling you to reduce your intake, or better quit.

1. You feel tired and lack energy

If you often find yourself feeling tired or fatigued, one of the main causes could be too much sugar in your diet. This may sound contradictory, as high-sugar foods are known give you a carbohydrate boost. But it temporarily boost your energy - a feeling that often lasts for just a couple of minutes.

2. You often get sugar and carbohydrate cravings

If you find yourself craving something sweet throughout the day on a daily basis, you are likely a sugar addict. Consuming sugar regularly can create a chain reaction of sugar cravings. The same concept applies with a craving for carbohydrates, which may also indicate a sugar addiction.

3. You frequently get ill

If you have noticed yourself getting sick on a regular basis, one of the causes could be excessive sugar in the diet. Consuming too much sugar can dampen your immune system, weakening your body's natural ability to fight colds, flu viruses and chronic diseases.

4. You suffer from anxiety or depression

Consuming too much sugar can cause your body to physically crash, which can affect you emotionally too. While sugar is temporarily energy-boosting, once its effects have worn off, the physical fatigue that arises may also be accompanied by psychological fatigue, causing feelings associated with depression such as lethargy, sadness, and social withdrawal. If you are often anxious, nervous or constantly worried, it may also be a sign that your sugar-filled diet needs adjustment.

5. You have issues with your skin

Inflammatory related flare ups like acne or eczema, as well as skin that is oily or dry and dark circles under the eyes - could be a result of a diet rich in sugar. Cutting sugar may greatly improve your skin issues, as well as your overall health. Furthermore, sugar's inflammatory properties may also have an effect on your feet, causing conditions such as plantar fascitis. This causes pain in the thick band of tissue that runs across the bottom of your foot, in your heel or elsewhere in the foot.

6. You are overweight

While the human body can cope with limited amounts of sugar, loading up on sugar calories will cause the body to convert the sugar and store it as body fat instead. Unsurprisingly, this can quickly lead to weight problems like obesity - causing a host of problems including high cholesterol, cardiac problems, sleep apnea and more.

7. You have high blood pressure

The general consensus says that high blood pressure is caused by sodium in your diet, rather than sugar. In one study, conducted in 2010 at the University of Colorado, Denver, more than 4,500 adults were studied and the data gathered showed that there was a link between high blood pressure and excessive sugar consumption.

8. You have dental problems

It is a well-known fact that sugar is not good for your teeth. If you often require cavities, fillings or root canals, sugar could be the cause of your problems.

9. You have diabetes

Consuming too much sugary foods can cause you to gain weight, upping your risk for developing type II diabetes. While you may not be diabetic, most people tend to be pre-diabetic. So, if you find yourself constantly thirsty or hungry, despite eating and drinking frequently, if you feel flushed after a sugar binge or weak whenever you skip a meal, you should talk to your doctor about your risk for diabetes.

10. You suffer from heart problems

A study conducted on rats at Case Reserve Western University, concluded that a high-sucrose diet was found to hasten death and increase the risk for cardiac issues, even more so than high-fructose, high-fat, or high-starch diets.

*(Information collected by Shri R. P. Hegde)*

*PAGE DONATED BY : **SMT. MADHU HEGDE,** SANTACRUZ*

## ಖಾದ್ಯ ಕೈಗನ್ನಡಿ



ಶ್ರೀಮತಿ ಯಶೋದಾ ಹೆಗಡೆ, ನಾಡಗುಳಿ ರಚಿತ 'ಖಾದ್ಯ ಕೈಗನ್ನಡಿ' ವಿವಿಧ ಬಗೆಯು, ವಿವಿಧ ಪ್ರಾಂತ್ಯದ ತಿಂಡಿ ತಿನಿಸುಗಳ ವಿವರಗಳನ್ನೊಳಗೊಂಡ ಪಾಕ ಪುಸ್ತಕ. ಇವರ ಜನ್ಮಸ್ಥಳ ನಡುವಿನ ಬಣಗೆ. ತಾ. ಸಿದ್ದಾಪುರ. ತಮ್ಮ ಜೀವನದ ಬಹುಮುಖ್ಯವಾದ ೩೦ ವರ್ಷಗಳ ಕಾಲವನ್ನು ಪತಿಯೊಡನೆ, ಮಕ್ಕಳೊಡನೆ ಕಳೆದದ್ದು ಮುಂಬೈ ಮಹಾನಗರದಲ್ಲಿ. ಅಪ್ಪಟ ಗ್ರಾಮೀಣ ಭಾಗದಿಂದ ವಲಸೆ ಬಂದ ಯಶೋದಾ ಹೆಗಡೆಯವರು ಮುಂಬೈ ಶಹರದ ಅವಕಾಶಗಳನ್ನೇ ತಮ್ಮದಾಗಿಸಿಕೊಂಡು ವಿವಿಧ ಜಾತಿ, ಮತ, ಪಂಥಗಳ ಜನರೊಂದಿಗೆ ಬೆರೆತು ವಿವಿಧ ಪ್ರಾಂತಗಳಲ್ಲಿ, ದೇಶಗಳಲ್ಲಿ ಪ್ರವಾಸ ಮಾಡಿ ಕಲೆ ಹಾಕಿದ ತಮ್ಮ ದಿವ್ಯ ಅನುಭವಗಳನ್ನು ಕಂಡು ಕೇಳಿ ಪ್ರಯೋಗಿಸಿ ತಮ್ಮದಾಗಿಸಿಕೊಂಡ ಅಡುಗೆಯ ಜ್ಞಾನಭಂಡಾರದ ಫಲವೇ 'ಖಾದ್ಯ ಕೈಗನ್ನಡಿ'. ಈ ಪುಸ್ತಕದಿಂದ ಆಯ್ದ ಪಾಕವಿಧಾನಗಳನ್ನು ಹವ್ಯಕ ಸಂದೇಶದಲ್ಲಿ ಪ್ರತಿ ತಿಂಗಳು ನೀಡಲಾಗುವುದು.

### ಮಲಾಯಿ ಕೋಫ್ತಾ (ಪಂಜಾಬ್)

**ಬೇಕಾಗುವ ಸಾಮಾಗ್ರಿ : ಗ್ರೇವಿ :** ತುಪ್ಪ ಸ್ವಲ್ಪ, ಎರಡು ಈರುಳ್ಳಿ ರುಬ್ಬಿದ್ದು, ಖೋವಾ ಎರಡು ಟೀ. ಚ., ಉಪ್ಪು ರುಚಿಗೆ, ಗರಂ ಮಾಸಾಲಾ 1 ಟೀ.ಚ., ಕ್ರೀಮ್ 3 ಟೀ.ಚ. , ರುಬ್ಬಿದ ಗೋಡಂಬಿ 4 ಟೀ.ಚ. ಪನ್ನೀರ್ ಸ್ವಲ್ಪ, ಸ್ವಲ್ಪ ಏಲಕ್ಕಿ ಪುಡಿ, ಅರಶಿಣ ಸ್ವಲ್ಪ.

**2. ಸ್ಟಫ್ ಮಾಡಲು :** ಪನ್ನೀರ್ 2 ಟೀ.ಚ., ಖೋವಾ 2ಟೀ.ಚ., ಗೋಡಂಬಿ, ದ್ರಾಕ್ಷಿ ಸ್ವಲ್ಪ, ಏಲಕ್ಕಿ ಪುಡಿ, ಎಣ್ಣೆ ಕರಿಯಲು.

**3. ಕೋಫ್ತಾ ಮಾಡಲು :** ಎರಡು ಬೇಯಿಸಿ ನುರಿದ ಆಲೂಗಡ್ಡೆ, ಉಪ್ಪು, ಅರಶಿಣ, ಅರೆದ ಶುಂಠಿ, ಬೆಳ್ಳುಳ್ಳಿ ಸ್ವಲ್ಪ, ಕೋರ್ನ್‌ಫ್ಲೋರ್ ಸ್ವಲ್ಪ, ತುರಿದ ಚೀಸ್ ಅಲಂಕಾರಕ್ಕೆ.

**ನಂ. 1 ಗ್ರೇವಿ :** ಒಂದು ಪಾತ್ರೆಯಲ್ಲಿ ತುಪ್ಪ ಬಿಸಿ ಮಾಡಿ ರುಬ್ಬಿದ ಈರುಳ್ಳಿ ಹಾಕಿ ಹುರಿಯಿರಿ. ಆಮೇಲೆ ಬಾಕಿ ಎಲ್ಲ ಸಾಮಾಗ್ರಿಗಳನ್ನು ಒಂದೊಂದಾಗಿ ಹಾಕಿ ಚೆನ್ನಾಗಿ ಕುದಿಸಿ ಇಳಿಸಿ.

**ನಂ. 2 ಸ್ಟಫ್ :** ಎಣ್ಣೆಯ ಹೊರತಾಗಿ ಬಾಕಿ ಪದಾರ್ಥ ಸೇರಿಸಿ ಚೆನ್ನಾಗಿ ಮಿಕ್ಸ್ ಮಾಡಿ ಸಣ್ಣ ಸಣ್ಣ ಉಂಡೆ ಮಾಡಿ ಇಡಿ.

**ನಂ. 3 ಕೋಫ್ತಾ ಮಾಡಲು :** ಕೋರ್ನ್‌ಫ್ಲೋರ್ ಮತ್ತು ತುರಿದ ಚೀಸ್ ಹೊರತುಪಡಿಸಿ ಬಾಕಿ ಎಲ್ಲಾ ಸಾಮಾಗ್ರಿ ಹಾಕಿ ಚೆನ್ನಾಗಿ ಮಿಕ್ಸ್ ಮಾಡಿ ಕೈಯಲ್ಲಿ ತಟ್ಟಿ ಅದರೊಳಗೆ ಮಾಡಿಟ್ಟ ಉಂಡೆ ಹಾಕಿ ಕಟ್ಟಿ, ಕೋರ್ನ್‌ಫ್ಲೋರ್‌ನಲ್ಲಿ ಉರುಳಾಡಿಸಿ ಕರಿಯಿರಿ. ಆಮೇಲೆ ಮಾಡಿಟ್ಟ ಗ್ರೇವಿಯಲ್ಲಿ ಕರಿದ ಉಂಡೆ (ಕೋಫ್ತಾ) ಹಾಕಿ ಅದರ ಮೇಲೆ ತುರಿದ ಚೀಸ್ ಹಾಕಿ ಅಲಂಕಾರ ಮಾಡಿ (ಗಾರ್ನಿಶ್). ಈಗ ಸವಿಯಲು ಸಿದ್ಧ ಮಲಾಯಿ ಕೋಫ್ತಾ.

### ಹವ್ಯಕ ವೆಲ್ಫೇರ್ ಟ್ರಸ್ಟ್, ಮುಂಬಯಿ

## ಕರ್ಕಿ ವೆಂಕಟರಮಣ ಶಾಸ್ತ್ರೀ ಸೂರಿ ದತ್ತಿನಿಧಿ ಪ್ರಕಟಣೆ

ನಮ್ಮ ಸಂಸ್ಥೆಯು 2005 ರಲ್ಲಿ, ಕನ್ನಡ ಸಾರಸ್ವತ ಲೋಕದಲ್ಲಿ ಪ್ರಥಮಗಳ ಹರಿಕಾರ ಎಂದೇ ಪ್ರಾತಃ ಸ್ಮರಣೀಯರಾದ ಶ್ರೀ ಕರ್ಕಿ ವೆಂಕಟರಮಣ ಶಾಸ್ತ್ರಿ ಸೂರಿಯವರ ಸ್ಮರಣಾರ್ಥ ದತ್ತಿ ನಿಧಿಯನ್ನು ಸ್ಥಾಪಿಸಿ ಪ್ರತೀ ವರ್ಷವೂ ಕರ್ಕಿ ಸೂರಿಯವರ ನೆಚ್ಚಿನ ಕಾರ್ಯಕ್ಷೇತ್ರಗಳಾದ ಸಾಹಿತ್ಯ, ಕಲೆ, ಪತ್ರಿಕೋದ್ಯಮ ಮತ್ತು ಸಮಾಜ ಸೇವೆಗಳಲ್ಲಿ ಗಣನೀಯ ಸಾಧನೆ ಗೈದ ಕನ್ನಡದ ಸಾಧಕರೋರ್ವರನ್ನು ಗುರುತಿಸಿ "ಕರ್ಕಿ ವೆಂಕಟರಮಣ ಶಾಸ್ತ್ರೀ ಸೂರಿ" ಪ್ರಶಸ್ತಿಯನ್ನು ನೀಡಿ ಗೌರವಿಸುತ್ತಾ ಬಂದಿದೆ.

ಈ ವರ್ಷದ 2016-17ನೇ ಸಾಲಿನ ಪ್ರಶಸ್ತಿಯನ್ನು ಪ್ರತಿಕೋದ್ಯಮದಲ್ಲಿ ವಿಶೇಷ ಸೇವೆ ಸಲ್ಲಿಸಿದವರಿಗೆ ನೀಡುವ ಸರದಿಯಾಗಿದೆ. ಈ ಕ್ಷೇತ್ರದಲ್ಲಿ ತಮ್ಮ ಛಾಪನ್ನು ಮೂಡಿಸಿದಂತಹ ವ್ಯಕ್ತಿಯ ಹೆಸರನ್ನು ಸೂಚಿಸಿ ಅವರ ವಿವರಗಳನ್ನು ನಮ್ಮ ಸಂಸ್ಥೆಯ ವಿಳಾಸಕ್ಕೆ ಅಥವಾ ಈಮೇಲ್ ಮೂಲಕವೂ ಕಳಿಸಬಹುದಾಗಿದೆ. ವಿವರಗಳು 31 ಅಕ್ಟೋಬರ್, 2016ರ ಒಳಗಾಗಿ ನಮ್ಮ ಕೈಸೇರಬೇಕಾಗಿ ಈ ಪ್ರಕಟಣೆಯ ಮೂಲಕ ವಿನಂತಿಸುತ್ತಿದ್ದೇವೆ. ಈ ವಿಷಯದಲ್ಲಿ ಆಯ್ಕೆ ಸಮಿತಿಯ ನಿರ್ಧಾರವೇ ಅಂತಿಮವಾಗಿರುತ್ತಿದೆ.

UIL

UGRU INDUSTRIES

*With Best Compliments from*

UGRU INDUSTRIES

**Manufacturers of Speciality food products**

Industrial Estate, Kumta,
North Kanara District, Karnataka

Plot Q1 & 2, Industrial Estate,
Hegde Road, Kumta, North Kanara District,
Karnataka - 581343, India.
Tel. & Fax : 08386-223-832
E-mail: ugruind@yahoo.co.in

***ADVT.***

*PAGE DONATED BY :* ***SHRI V. G. BHAT, NIGDI***

# ಸಂಕ್ಷಿಪ್ತ ಸುದ್ದಿಗಳು

## ಸ್ವರ್ಣವಲ್ಲಿ ಸೇವಾ ಸಮಿತಿ ಮುಂಬಯಿ ಶ್ರೀ ವರಮಹಾಲಕ್ಷ್ಮೀ ಪೂಜೆಯ ವರದಿ



ನಮ್ಮ ಮನಸ್ಸಿನ ವಿಕ್ಷೇಪಗಳನ್ನು, ದುಗುಡ-ದುಮ್ಮಾನಗಳನ್ನು ಕಳೆದುಕೊಳ್ಳುವ ಮೂಲಕ ಭಗವಂತನಲ್ಲಿ ಮನಸ್ಸನ್ನು ನೆಲೆ ನಿಲ್ಲಿಸುವುದಕ್ಕೋಸ್ಕರ ನಮ್ಮ ಪರಂಪರೆಯಲ್ಲಿ ವಿವಿಧ ವ್ರತಾನುಷ್ಠಾನಗಳನ್ನು ವಿಧಿಸಿರುವುದು ಕಂಡು ಬರುತ್ತದೆ. ಮೇಲ್ನೋಟಕ್ಕೆ ಐಹಿಕ-ಆಮುಷ್ಮಿಕ ಫಲಪ್ರಾಪ್ತಿಗೋಸ್ಕರ ವಿಧಿಸಲ್ಪಟ್ಟಂತೆ ಕಂಡರೂ ವ್ರತಾನುಷ್ಠಾನಗಳ ಹಾಗೂ ನಿತ್ಯ ನೈಮಿತ್ತಿಕ ಕರ್ಮಗಳ ಮೂಲ ಉದ್ದೇಶ ಮನಸ್ಸಿನ ದೋಷಗಳ ಪರಿಮಾರ್ಜನೆ ಮತ್ತು ಭಗವಂತನಲ್ಲಿ ಮನಸ್ಸನ್ನು ನೆಲೆನಿಲ್ಲಿಸುವುದೇ ಆಗಿದೆ. ಈ ಹಿನ್ನೆಲೆಯಲ್ಲಿ ಪ್ರಾಪಂಚಿಕ ವ್ಯವಹಾರಗಳಿಂದ ಆಯಾಸಗೊಂಡ ಮನಸ್ಸಿಗೆ ಒಂದು ಸ್ವಾಸ್ಥ್ಯ ಲಭಿಸುವುದಾದರೆ ಅದು ಭಗವಚ್ಚಿಂತನೆಯಿಂದ ಮಾತ್ರ. ಆದ್ದರಿಂದ ಆಯಾ ಕಾಲಕ್ಕೆ ಪ್ರಾಪ್ತವಾಗುವ ವ್ರತಾನುಷ್ಠಾನಗಳನ್ನೂ, ನಿತ್ಯ ನೈಮಿತ್ತಿಕ ಕರ್ಮಗಳನ್ನು ನಿಷ್ಠೆಯಿಂದ ಆಚರಿಸಬೇಕಾದದ್ದು ಎಲ್ಲ ಆಸ್ತಿಕರ ಕರ್ತವ್ಯವಾಗಿದೆ. ಪ್ರಸ್ತುತ ಮುಂಬೈಯಲ್ಲಿ ನೆಲೆಸಿರುವ ಎಲ್ಲ ಭಕ್ತರೂ ಸಾಮೂಹಿಕವಾಗಿ ಶ್ರೀ ವರಮಹಾಲಕ್ಷ್ಮೀ ವ್ರತ ಹಾಗೂ ಉಪಾಕರ್ಮಗಳನ್ನು ನೆರವೇರಿಸುತ್ತಿರುವುದು ನಿಜಕ್ಕೂ ಸಮಂಜಸವೇ ಆಗಿದೆ. ಆಯೋಜಿಸಲ್ಪಟ್ಟ ಕಾರ್ಯಕ್ರಮಗಳು ನಿರ್ವಿಘ್ನವಾಗಿ ಸಂಪನ್ನಗೊಳ್ಳಲಿ. ತನ್ಮೂಲಕ ಎಲ್ಲ ಆಸ್ತಿಕರಲ್ಲಿಯೂ ಧರ್ಮಶ್ರದ್ಧೆ, ಸಾತ್ವಿಕ ಪ್ರವೃತ್ತಿಗಳು ಹೆಚ್ಚಲಿ ಎಂದು ಆರಾಧ್ಯ ಶ್ರೀ ದೇವರಲ್ಲಿ ಪ್ರಾರ್ಥಿಸಿ ಆಶೀರ್ವದಿಸುತ್ತೇವೆ' ಎಂಬ ಶ್ರೀ ಗಂಗಾಧರೇಂದ್ರ ಸರಸ್ವತಿ ಸ್ವಾಮಿಗಳ ಆಶೀರ್ವಚನವನ್ನು ಮನನ ಮಾಡುತ್ತಾ ಮುಂಬಯಿ ಸದ್ಭಕ್ತರು ದಿನಾಂಕ 12.08.2016 ಶ್ರಾವಣ ಶುಕ್ಲ ನವಮಿ, ಶುಕ್ರವಾರದಂದು ಸ್ವರ್ಣವಲ್ಲಿ ಸೇವಾ ಸಮಿತಿ, ಮುಂಬಯಿ ವತಿಯಿಂದ ಆಯೋಜಿಸಲಾದ ಶ್ರೀ ವರಮಹಾಲಕ್ಷ್ಮೀ ಪೂಜೆಯಲ್ಲಿ ಪಾಲ್ಗೊಂಡು ಶ್ರೀ ದೇವಿಯ ಕೃಪೆಗೆ ಪಾತ್ರರಾದರು.

ಶ್ರೀ ವಿ. ಎನ್. ಹೆಗಡೆ, ಕಲ್ವಾ ದಂಪತಿಗಳು ಶ್ರದ್ಧಾ ಭಕ್ತಿಯಿಂದ ಈ ಪೂಜೆಯ ಯಜಮಾನತ್ವ ವಹಿಸಿ ಶ್ರೀ ಅನಂತ ಭಟ್ಟ, ಡೊಂಬಿವಲಿ ಯಲ್ಲಾಪುರ ಇವರ ಮಾರ್ಗದರ್ಶನದೊಂದಿಗೆ ಶ್ರೀ ವರಮಹಾಲಕ್ಷ್ಮೀ ಪೂಜೆಯನ್ನು ಕೈಗೊಂಡರು. ಅನೇಕ ಮಹಿಳೆಯರ ಸಹಭಾಗಿತ್ವದೊಂದಿಗೆ ಪೇಜಾವರ ಮಠ, ಸಾಂತಾಕ್ರೂಜ್, ಮುಂಬಯಿ ಇವರ ಸಹಕಾರದಿಂದ ಕಾರ್ಯಕ್ರಮವನ್ನು ಸಾಂಗವಾಗಿ ನೆರವೇರಿಸಲಾಯಿತು. ಈ ಕಾರ್ಯಕ್ರಮವನ್ನು ಈ ಕೆಳಗಿನ ದಾನಿಗಳ ಸಹಾಯ ಹಸ್ತದಿಂದ ಸಾಕಾರಗೊಳಿಸಲಾಯಿತು. ಶ್ರೀ ವಿ. ಎನ್. ಹೆಗಡೆ, ಕಲ್ವಾ, ಶ್ರೀ ವಸಂತ್ ಭಟ್, ಶ್ರೀ ಸುರೇಶ್ ಹೆಗಡೆ, ಶ್ರೀ ಕೆ. ಸಿ. ಹೆಗಡೆ, ಶ್ರೀಮತಿ ಪೂರ್ಣಿಮಾ ಅಕದಾಸ.

ಈ ಕಾರ್ಯಕ್ರಮದಲ್ಲಿ ಸಹಕರಿಸಿದ ಸರ್ವರಿಗೂ ಶ್ರೀಮತಿ ತನುಜಾ ಹೆಗಡೆಯವರು ಅಭಿನಂದನೆಗಳನ್ನು ಸಮರ್ಪಿಸಿದರು. ಇದೇ ದಿನ ಡೊಂಬಿವಲಿಯ ಹವ್ಯಕ ಮೆಡಿಕಲ್ ಸೆಂಟರ್‌ನಲ್ಲಿಯೂ ಮಹಿಳೆಯರು ಸಾಮೂಹಿಕ ವರಮಹಾಲಕ್ಷ್ಮೀ ಪೂಜೆಯನ್ನು ಶ್ರೀ ಚಂದ್ರಶೇಖರ ಭಟ್ಟ ಡೊಂಬಿವಲಿ ಇವರ ಮಾರ್ಗದರ್ಶನದೊಂದಿಗೆ ನೆರವೇರಿಸಿದರು.

## ಬಿಡುಗಡೆಗೊಂಡ 'ನೂತನ ಗೀತಾ ಶತಕ' ಧ್ವನಿಸುರುಳಿ



ಸನಾತನ ಸಂಸ್ಕೃತಿ ಉಳಿಸಿ ಕೊಂಡು ಹೋಗುವಲ್ಲಿ ಸಾಂಪ್ರದಾಯಿಕ ಹಾಡುಗಳು ಪ್ರಮುಖ ಪಾತ್ರ ವಹಿಸಿವೆ. ಜಿಲ್ಲೆಯ ಹಳ್ಳಿಹಳ್ಳಿಗಳಲ್ಲಿ ಹಾಸು ಹೊಕ್ಕಾಗಿರುವ ಹಳೇ ಹಾಡು ಇಂದಿನ ತಂತ್ರಜ್ಞಾನದ ದಿನಗಳಲ್ಲಿ ನಶಿಸುತ್ತಿವೆ. ಇವುಗಳನ್ನು ಧ್ವನಿಸುರುಳಿಯಾಗಿ ರಕ್ಷಿಸುವ ಕಾರ್ಯವನ್ನು ನಗರದ ವೀಣಾ ಜೋಶಿ ನಡೆಸುತ್ತಿದ್ದಾರೆ.

ಹಳ್ಳಿ ಹಾಡುಗಳು ಹುಟ್ಟಿದ ಬಳಿಕ ಜನರಿಂದ ಜನರಿಗೆ, ತಲೆಮಾರಿನಿಂದ ತಲೆಮಾರಿಗೆ ಸಾಗುತ್ತ ಬಂದಿವೆ. ಇವುಗಳನ್ನು ಕಲಿತು ಸುಶ್ರಾವ್ಯವಾಗಿ ಹಾಡುವ ಆಸಕ್ತಿಯನ್ನು ಬಾಲ್ಯದಿಂದಲೇ ಬೆಳೆಸಿಕೊಂಡು ಬಂದವರು ವೀಣಾ ಜೋಶಿ. ಶಾಸ್ತ್ರೀಯ ಸಂಗೀತವನ್ನು ಪಂ. ಪ್ರಭಾಕರ ಭಟ್ ಕೆರೆಕೈ ಹಾಗೂ ಪಂ. ಎಂ.ಪಿ. ಹೆಗಡೆ ಅವರಲ್ಲಿ ಕಲಿತು ವಿದ್ವತ್ತನ್ನು ರೇಖಾ ಭಟ್ ಕೋಟೆಮನೆ ಅವರಲ್ಲಿ ಅಭ್ಯಸಿಸಿದ್ದಾರೆ. ಆದರೆ ಬಾಲ್ಯದಲ್ಲಿ ಕಲಿತ ಹಳ್ಳಿ ಹಾಡುಗಳನ್ನು ಎಲ್ಲರಿಗೂ ತಲುಪಿಸುವ ತುಡಿತ ಅವರೊಂದಿಗೆ ಸದಾ ಇತ್ತು. ಕಳೆದ 2 ವರ್ಷಗಳ ಹಿಂದೆ ಸಾಂಪ್ರದಾಯಿಕ ಮದುವೆ ಹಾಡುಗಳ 'ವಿಘ್ನೇಶ್ವರನ ಬಲಗೊಂಬೆ' ಧ್ವನಿಸುರುಳಿಯನ್ನು ಹೊರತಂದರು. ಸಾರ್ವಜನಿಕರಿಂದ ಉತ್ತಮ ಪ್ರಶಂಸೆ ವ್ಯಕ್ತಗೊಂಡ ಹಿನ್ನೆಲೆಯಲ್ಲಿ ಈಗ 'ನೂತನ ಗೀತಾ ಶತಕ' ಎಂಬ ಹಾಡುಗಳ ಪುಸ್ತಕವನ್ನು ಸಿದ್ಧಪಡಿಸಿದ್ದಾರೆ. ಇದರ ಜೊತೆಯಲ್ಲಿಯೇ ಅವರೇ ಹಾಡಿರುವ ಧ್ವನಿಸುರುಳಿಯನ್ನೂ ಉಚಿತವಾಗಿ ನೀಡಲು ನಿರ್ಧರಿಸಿದ್ದಾರೆ. ಜುಲೈ 19ರಂದು ಹಾಡಿನ ಪುಸ್ತಕ ಹಾಗೂ ಧ್ವನಿಸುರುಳಿಯನ್ನು ಸ್ವರ್ಣವಲ್ಲಿಯಲ್ಲಿ ಶ್ರೀ ಗಂಗಾಧರೇಂದ್ರ ಸರಸ್ವತಿ ಸ್ವಾಮೀಜಿಯವರು ಬಿಡುಗಡೆಗೊಳಿಸಿದರು.

## Achievements

**Kumari Shruti** D/o. Smt. Suchita and Shri Laxminarayan Bhat (Sannabadti mane, Gokarn) secured 95% in 10th Standard (C.B.S.E. Board). Examination

*PAGE DONATED BY : **SMT. GANGA P. BHAGWAT PRABHADEVI IN MEMORY OF LATE SHRI P. R. BHAGWAT (DEC. 2012)***



held in March-2016. Her varied interest includes Indian Classical Music and drawing sketches. She has participated in various Group. Singing Competitions through her school 'D.A.V Public School, Panvel' which has bagged many prizes. She was the leading singer in Live Telecast of group singing of Sanskrit song organized by her school on D. D. Sahyadri T. V. Channel.

***We congratulate and wish her all the best for the future endeavors.***

## ನಿಧನ



ಗೋಕರ್ಣ ಮೂಲದವರಾದ ಕಾಂದಿವಲಿಯ ನಿವಾಸಿ ವೇ. ಮೂ. ಶ್ರೀ ಅನಂತ ಭಟ್ಟ, ಕೊಡಗಿ ಇವರು ತಮ್ಮ 80ನೇ ವಯಸ್ಸಿನಲ್ಲಿ ಅಲ್ಪಕಾಲದ ಅನಾರೋಗ್ಯದಿಂದ ಕಳೆದ ದಿನಾಂಕ 11.08.2016 ಬುಧವಾರದಂದು ದೈವಾಧೀನರಾದರು. ಸಕಲ ವೇದ ಪಾರಂಗತರೂ, ನಿರಾಡಂಬರಿಗಳೂ, ಸರಳ ಸಜ್ಜನರೂ ಆದ ಇವರ ನಿಧನವು ನಮ್ಮ ಹವ್ಯಕ ಸಮಾಜಕ್ಕೊಂದು ತುಂಬಲಾರದ ನಷ್ಟವಾಗಿದೆ. ಅವರ ಆತ್ಮಕ್ಕೆ ಶಾಂತಿ ಸಿಗಲಿ ಮತ್ತು ಅವರ ಧರ್ಮಪತ್ನಿ, ಪುತ್ರಿ, ಅಳಿಯ, ಮೊಮ್ಮಕ್ಕಳು ಮತ್ತು ಅಪಾರ ಬಂಧು ಬಳಗದ, ಶಿಷ್ಯವರ್ಗದವರಿಗೆ ಈ ಕೊರತೆಯನ್ನು ಸಹಿಸುವ ಸಾಮರ್ಥ್ಯ ಆ ಭಗವಂತನು ನೀಡಲಿ ಎಂದು ನಮ್ಮ ಹವ್ಯಕ ಸಮಾಜದ ವತಿಯಿಂದ ನಮ್ಮೆಲ್ಲರ ಪ್ರಾರ್ಥನೆ.

## Drama Book launch 'Ahe Mhanoon Ahe'



Welknown Marathi Actor Shri Prashant Damle released Marathi play **'Ahe Mhanoon Ahe'** a translation of Kannada play written by Subraya Bhat, a specialist in Method Theatre and an actor and director on 21st July 2016 at 7 p.m. at MIG Cricket Club, Pale Star Hall, 2nd floor, Bandra East, Mumbai - 400 051. The Play is translated into Marathi by Smt. Radha Shamrao of Dharwad.

Dr. Sharad Sawant, holding TISCO Chair at Tata Institute of Social Sciences and former Director, Ambekar Institute for Labour Studies presided the function.

The Kannada play titled 'Ide Yennuvudakkide' is a thought provoking play having full of humorous situations and is based on the structural method of theatre evolved by Prof. Ranganath Bharadwaj. It also lampoons the present educational system where we say all are equal and then rank them 1st and 2nd, likewise several contradictory frames are looked at humorously thus presenting the entire system as 'Ahe Mhanoon Ahe'.

The later part of the play speaks of some of the superficial philosophical thoughts which are baseless or rather hypothetical, thus they are self contradictory... These philosophical streams are 'Ahe Mhanoon Ahe'.

**About the Playwrite : Mr. Subraya Bhat** is the first one man performing artist of Kannada Theatre who has performed three hours one man drama in 1964-65. He is recepient of several awards including 'Best Actor' in Interstate drama competition. He has conducted record number of Drama workshops all over India and abroad. He has even held workshop for physically challenged children and slum dwellers. His research work on threatre mehtod under the guidance of his teacher Prof. Ranganath Bharadwaj, the doyan of Modern Indian Dramas is considered to be a rare research work. Currently Bhat is Secretary cum Technical Co-ordinator of the Structural School of Fine Arts, 'Vijayaranga', Vijayanagar, Bengaluru - 560 040.

## ಸೆ. 3ರಂದು ಮುಂಬೈ ವಿಶ್ವವಿದ್ಯಾಲಯದಲ್ಲಿ ಡಾ. ನಿಂಜೂರು ಸಾಹಿತ್ಯ ಸಂಭ್ರಮ



ಮುಂಬೈ ಕನ್ನಡ ವಿಭಾಗ ಮುಂಬೈ ವಿಶ್ವವಿದ್ಯಾಲಯದ ಆಶ್ರಯದಲ್ಲಿ ಸೆಪ್ಟೆಂಬರ್ 3 ರಂದು ಶನಿವಾರ ದಿನಪೂರ್ತಿ ಡಾ. ನಿಂಜೂರ್ ಸಾಹಿತ್ಯ ಸಂಭ್ರಮ ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿಯ ಕಥಾಕಥನ ಕಾರ್ಯಕ್ರಮ ನಡೆಯಲಿದೆ. ರಮಾ ಉಡುಪ ಅವರು ರಚಿಸಿದ ಡಾ. ನಿಂಜೂರ್ ಜೀವನ ಸಾಧನೆಯ ಬಗೆಗಿನ ಕೃತಿ ಹಾಗೂ ಡಾ. ವ್ಯಾಸರಾವ್ ನಿಂಜೂರ್ ಅವರ ಹೊಸ ಕಾದಂಬರಿ 'ತೆಂಕನಿಡಿಯೂರಿನ ಕುಳುವಾರಿಗಳು' (ಅಂಕಿತ ಪ್ರಕಾಶನ, ಬೆಂಗಳೂರು) ಬಿಡುಗಡೆಯಾಗಲಿದೆ. ಈ ಕಾರ್ಯಕ್ರಮದಲ್ಲಿ ಸಹೃದಯರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕೆಂದು ವಿಭಾಗದ ಮುಖ್ಯಸ್ಥ ಡಾ. ಜಿ. ಎನ್. ಉಪಾಧ್ಯ ಅವರು ಮನವಿ ಮಾಡಿಕೊಂಡಿದ್ದಾರೆ.

## ಸೆಪ್ಟೆಂಬರ್ 17ರಂದು ಶ್ರೀನಿವಾಸ ಜೋಕಟ್ಟೆ ಸಾಹಿತ್ಯ ಚಿಂತನ ಕಾರ್ಯಕ್ರಮ

ಮುಂಬಯಿಯ ಕ್ರಿಯಾಶೀಲ ಲೇಖಕ, ಸಾಹಿತಿ, ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಗೆ ಪಾತ್ರರಾದ ಶ್ರೀನಿವಾಸ ಜೋಕಟ್ಟೆ ಅವರ

*Page Donated by : **Shri Suhas Gunishastri,** Prabhadevi In the memory of his parents **Late Smt. Rajeshwari & Late Shri P. V. Gunishastri ,** Past President, H.W.T.*

*'Havyaka Sandesha' August 2016*

***RNI NO. MAHBIL / 2000 / 746,***
***Postal R.NO. MCN/161/2015-2017***
***WPP License No. MR / Tech / WPP-130 / North / 2016***
***'Licence to post without prepayment'***

| | |
|---|---|
| ***Posted at Mumbai Patrika Channel Stg. Office Mumbai - 400 001***<br>**Date of Publication : 1st of every month** **REGISTERED NEWSPAPER** | **Date of Posting :**<br>**2nd, 3rd of every month** |
| ***If undelivered, please return to :***<br>**HAVYAKA WELFARE TRUST**<br>B-207, Valmiki Apts., Near Pharmacy College, Sundar Nagar, Kalina, Vidyanagari P. O., Mumbai - 400 098. ✆ 2665 2591<br>**E-mail : havyakamumbai@hotmail.com**<br>**Visit : www.havyakamumbai.com**<br><br>Published by Narayan Akadas R.<br>for Havyaka Welfare Trust, Mumbai - 400 098.<br>being printed at M/s. Navin Printers, Mumbai - 400 016.<br>Hon. Editor : **Smt. Amita S. Bhagwat** | **To,** |




ಸಾಹಿತ್ಯ ಚಿಂತನ ಕಾರ್ಯಕ್ರಮವನ್ನು ಸೆಪ್ಟೆಂಬರ್ 17ರಂದು ಮಧ್ಯಾಹ್ನ 2ರಿಂದ ಮುಂಬಯಿ ವಿಶ್ವವಿದ್ಯಾಲಯದ ಜೆ. ಪಿ. ನಾಯಕ್ ಭವನದಲ್ಲಿ ಆಯೋಜಿಸಲಾಗಿದೆ. ಇದೇ ಸಂದರ್ಭದಲ್ಲಿ ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ಜಿ.ಎನ್. ಉಪಾಧ್ಯ ವಿರಚಿತ 'ಕ್ರಿಯಾಶೀಲ ಪತ್ರಕರ್ತ, ಸಾಹಿತಿ ಶ್ರೀನಿವಾಸ ಜೋಕಟ್ಟೆ' ಕೃತಿ ಬಿಡುಗಡೆ ಕಾರ್ಯಕ್ರಮ ನಡೆಯಲಿದೆ.

ಕೃತಿಯನ್ನು ಪ್ರಸಿದ್ಧ ರಂಗನಟ ಮೋಹನ್ ಮಾರ್ನಾಡ್ ಬಿಡುಗಡೆಗೊಳಿಸಲಿದ್ದಾರೆ. ಸಾಹಿತ್ಯಾಸಕ್ತರಿಗೆ ಆದರದ ಸ್ವಾಗತವಿದೆ ಎಂದು ವಿಭಾಗದ ಮುಖ್ಯಸ್ಥರಾದ ಡಾ. ಜಿ.ಎನ್. ಉಪಾಧ್ಯ ಅವರು ಪ್ರಕಟಣೆಯ ಮೂಲಕ ತಿಳಿಸಿದ್ದಾರೆ.

## Yajur Upakarma Celebration



Yajur Upakarma was organized on 18-8-2016 at Dombivli Medical Centre under the auspices of Shri Chandrashekhar Bhat. Almost 13 families participated in the Program. Shri Umesh Hegde who organised the programme hoped that more and more members participate in coming years.

## ಸತ್ಯ ಗಣಪತಿ

**- ಗೋಪಾಲಕೃಷ್ಣ ಹೆಗಡೆ, ಕೇರಿಮನೆ**

ಸತ್ಯ ಗಣಪತಿ ನಿತ್ಯದಾರತಿ
ದೇವ ನಿನ್ನಯ ಸನ್ನಿಧಿ
ಪಾಲಿಸೆಮ್ಮನು ಕರುಣೆಯಿಂದಲಿ
ಪಾವನಾಂಗ ದಯಾನಿಧಿ

ಮಂದಹಾಸದ ಸುಂದರಾಕೃತಿ
ಪಾಶ ಅಂಕುಶ ಕರದಲಿ
ನಾಟ್ಯ ಲೀಲಾಮೋದ ಕುಶಲಾ
ಚತುರ ಚಿತ್ತದ ಕಡುಗಲಿ

ಆದಿಪೂಜೆಯು ಸರ್ವಮಂಗಳ
ಕರನೆ ನಿನಗೆ ವಿನಾಯಕ
ನಿನ್ನ ದರುಶನದಿಂದ ಭಾಗ್ಯವು
ಸಿದ್ಧಿ ಬುದ್ಧಿ ಪ್ರದಾಯಕ

ಜಯತು ಗಜಮುಖ ಜಯತು ನಿಜಸುಖ
ದಾತ ಜಯ ಲಂಬೋದರ
ಅಭಯದಾಯಕ ವಿಭವ ಕಾರಕ
ಜಯತು ಜಯ ಜಯ ಶ್ರೀಕರ

✣ ✣ ✣

*PAGE DONATED BY : **SMT. TRIVENI BHATSHIKAR & SHRI R. T. BHATSHIKAR,** GHATKOPAR IN THE MEMORY OF **LATE SHRI T. R. BHATSHIKAR***